# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಫೆಬ್ರವರಿ 11, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49   ಸಂಚಿಕೆ : 270   ☎ 254736   91642 99999   RNI No: 27369/75   KA/SK/CTA-275/2021-2023. O/P @ B.V. Nagar P.O.   ಪುಟ : 6   ರೂ : 5.00   www.janathavani.com   janathavani@mac.com




## ಆವರಗೊಳ್ಳ ಶ್ರೀ ವೀರಭದ್ರೇಶ್ವರ ರಥೋತ್ಸವ

ದಾವಣಗೆರೆ ಸಮೀಪ ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಶುಕ್ರವಾರ ರಾತ್ರಿ ವಿಜೃಂಭಣೆಯಿಂದ ನೆರವೇರಿತು. ರಥೋತ್ಸವಕ್ಕೂ ಮುನ್ನ ದೊಡ್ಡಬಾತಿಯ ಶ್ರೀ ರೇಣಸಿದ್ದೇಶ್ವರ ಸ್ವಾಮಿ, ಶ್ರೀ ಬೀರಲಿಂಗೇಶ್ವರ ಸ್ವಾಮಿ ಹಾಗೂ ವೀರಭದ್ರಸ್ವಾಮಿ ದೇವರುಗಳನ್ನು ಗ್ರಾಮದ ರಾಜ ಬೀದಿಗಳಲ್ಲಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಾಯಿತು. ಸಂಜೆ 7.30ರ ವೇಳೆಗೆ ಶ್ರೀ ವೀರಭದ್ರ ಸ್ವಾಮಿ ರಥವನ್ನು ಏರಿದ ನಂತರ ಝುಂಡಾ ಹರಾಜು ಕಾರ್ಯ ನಡೆಯಿತು. 3,50,101ರೂ.ಗಳಿಗೆ ಆವರಗೊಳ್ಳದ ಗ್ರಾಮಸ್ಥರೊಬ್ಬರು ಝುಂಡಾ ಪಡೆದರು. ನಂತರ 8 ಗಂಟೆಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

# ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಸಾಧನೆಗಳ ವಿವರ

## ರೈತರು, ಕಾರ್ಮಿಕರು, ಬಡವರ ಅಭಿವೃದ್ಧಿಗೆ ಬದ್ಧತೆ

ಬೆಂಗಳೂರು, ಫೆ. 10 - ರಾಜ್ಯ ವಿಧಾನಸಭಾ ಚುನಾವಣಾ ಹೊಸ್ತಿಲಲ್ಲಿ ಭರವಸೆಗಳ ಹೊಳೆ ಹರಿಸಲು ಸಿದ್ಧತೆ ಮಾಡಿಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲರ ಭಾಷಣದಲ್ಲಿ ಕೇವಲ ತಮ್ಮ ಒಂದು ವರ್ಷದ ಸಾಧನೆಗಳನ್ನು ಬಿಂಬಿಸಲು ಅಷ್ಟೇ ಸೀಮಿತಗೊಳಿಸಿದ್ದಾರೆ.

ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್, ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳನ್ನು ಸದನದ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟರೇ ಹೊರತು, ಯಾವುದೇ ಭರವಸೆಗಳನ್ನು ನೀಡಲಿಲ್ಲ.

ಆದರೆ, ಅಭಿವೃದ್ಧಿ ಪಥದ ಮುಂಚೂಣಿಯ ರಾಜ್ಯವಾಗಿ ಕರ್ನಾಟಕ ದಾಪುಗಾಲು ಇಡುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿನ 25 ವರ್ಷಗಳ ಅಮೃತ ಕಾಲದಲ್ಲಿ ಹಾಕಿಕೊಟ್ಟ ಪ್ರಗತಿಯ ಪಥವನ್ನು ಯಶಸ್ವಿಯಾಗಿ ಕ್ರಮಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಧಾನಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾತನಾಡಿದ ಅವರು, ನನ್ನ ಸರ್ಕಾರವು ರೈತರು, ಕಾರ್ಮಿಕರು,



ಬಡವರು, ದುರ್ಬಲ ವರ್ಗದವರು ಮತ್ತು ಅವಕಾಶ ವಂಚಿತರ ಕಲ್ಯಾಣ ಹಾಗೂ ಅಭಿವೃದ್ಧಿಗೆ ಬದ್ದವಾಗಿದೆ ಎಂದರು.

ಅಭಿವೃದ್ಧಿಯ ಜೊತೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜನವರಿ ಅಂತ್ಯದವರೆಗೆ ರಾಜಸ್ವ ಸಂಗ್ರಹಣೆಯಲ್ಲಿ ಶೇಕಡ 91 ರಷ್ಟು ಗುರಿ ಸಾಧನೆ ಮಾಡಿದೆ. ಸ್ವಂತ ತೆರಿಗೆ ರಾಜ್ಯಸ್ವ ಸಂಗ್ರಹಣೆಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ, ಶೇಕಡ 21 ರಷ್ಟು ಹೆಚ್ಚಳವಾಗಿದೆ. ಬಜೆಟ್ ಅಂದಾಜಿನ ಶೇಕಡ 75 ರಷ್ಟು ಮೊತ್ತವನ್ನು ವೆಚ್ಚ ಮಾಡಿ, ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆ ಎಂದರು. ಹಣಕಾಸು ವ್ಯವಹಾರದಲ್ಲಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಶ್ಲಾಘಿಸಿದ ಅವರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸುವ ಐತಿಹಾಸಿಕ ಕ್ರಮವನ್ನು ಕೈಗೊಂಡಿದೆ.

ಸುಲಲಿತ ವ್ಯವಹಾರದ ವಿಷಯದಲ್ಲಿ ರಾಜ್ಯವು ದೇಶದಲ್ಲೇ ಅಗ್ರ ಸ್ಥಾನ ಪಡೆದಿದೆ. ಪ್ರಸಕ್ತ ಸಾಲಿನಲ್ಲಿ 25.87 ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟು ರಫ್ತು ವಹಿವಾಟಿಗೆ ರಾಜ್ಯದ ಕೊಡುಗೆಯಾಗಿ ನೀಡಿದೆ ಎಂದು ಹೇಳಿದರು.

ವಿದ್ಯುತ್ ವಲಯದಲ್ಲಿ ದಾಪುಗಾಲು ಇಟ್ಟಿದ್ದೇವೆ. ನಮ್ಮ ಬೇಡಿಕೆಯನ್ನು ಪೂರೈಸಿ, ಅನ್ಯರಾಜ್ಯಗಳಿಗೆ ಮತ್ತು ಕಂಪನಿಗಳಿಗೆ ಮಾರುವ ಸ್ಥಿತಿಗೆ ನಮ್ಮ ಸಂಸ್ಥೆಗಳು ಬಂದಿವೆ ಎಂದು ಹೇಳಿದರು.

ನನ್ನ ಸರ್ಕಾರವು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2(ಡಿ) 'ಭೂಮಿ' ಎಂಬ ಪರಿಭಾಷೆಗೆ ತಿದ್ದುಪಡಿ ತಂದು ಬಿ.ಬಿ.ಎಂ.ಪಿ. ವ್ಯಾಪ್ತಿಯ 18 ಕಿಲೋ ಮೀಟರ್, ಮಹಾ ನಗರ ಪಾಲಿಕೆ ವ್ಯಾಪ್ತಿಯ 10 ಕಿಲೋ ಮೀಟರ್, ನಗರಪಾಲಿಕೆ ವ್ಯಾಪ್ತಿಯ 5 ಕಿಲೋ ಮೀಟರ್, ಪುರಸಭೆ ವ್ಯಾಪ್ತಿಯ 3 ಕಿಲೋ ಮೀಟರ್‌ಗೆ ಸೀಮಿತಗೊಳಿಸಿ, (2ನೇ ಪುಟಕ್ಕೆ)

## ಜಮ್ಮು-ಕಾಶ್ಮೀರದಲ್ಲಿ 5.9 ದಶಲಕ್ಷ ಟನ್ ಲಿಥಿಯಂ ಸಂಗ್ರಹ ಪತ್ತೆ

ನವದೆಹಲಿ, ಫೆ. 10 - ಜಮ್ಮು ಮತ್ತು ಕಾಶ್ಮೀರದಲ್ಲಿ ಮೊದಲ ಬಾರಿಗೆ 5.9 ದಶಲಕ್ಷ ಟನ್ ಲಿಥಿಯಂ ಸಂಗ್ರಹ ಕಂಡುಬಂದಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಎಲೆಕ್ಟ್ರಿಕ್ ವಾಹನಗಳು, ಸ್ಮಾರ್ಟ್ ಫೋನ್ ಹಾಗೂ ಇತರೆ ಉಪಕರಣಗಳಲ್ಲಿ ಬಳಸುವ ಬ್ಯಾಟರಿಗಳಲ್ಲಿ ಲಿಥಿಯಂ ಪ್ರಮುಖ ಭಾಗವಾಗಿದೆ. ಭಾರತೀಯ ಭೂ ವಿಜ್ಞಾನ ಸರ್ವೇಕ್ಷಣಾ ಇಲಾಖೆಯು ಲಿಥಿಯಂ ಸಂಗ್ರಹ ಪತ್ತೆ ಮಾಡಿದೆ. ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಸಲಾಲ್ - ಹೈಮನ್ ಪ್ರದೇಶದಲ್ಲಿ ಲಿಥಿಯಂ ಪತ್ತೆಯಾಗಿರುವುದಾಗಿ ಕೇಂದ್ರ ಗಣಿ ಸಚಿವಾಲಯ ತಿಳಿಸಿದೆ. ಇದರೊಂದಿಗೆ ಭಾರತ ವಿಶ್ವದ 6ನೇ ಅತಿ ದೊಡ್ಡ ಲಿಥಿಯಂ ಸಂಗ್ರಹ ಪತ್ತೆಯಾಗಿರುವ ದೇಶವಾಗಿದೆ.

## ಸುಪ್ರೀಂ ಕೋರ್ಟ್‌ಗೆ ಮತ್ತೆ ಪೂರ್ಣ ಬಲ

ನವದೆಹಲಿ, ಫೆ. 10 – ಹೈಕೋರ್ಟ್‌ನ ಇಬ್ಬರು ಮುಖ್ಯ ನ್ಯಾಯಮೂರ್ತಿಗಳು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ಪಡೆಯಲು ಸರ್ಕಾರ ಅನುಮೋದನೆ ನೀಡಿದೆ. ಇದರಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಿಕೆಯಾಗಿದೆ. ಒಂಭತ್ತು ತಿಂಗಳ ನಂತರ ನ್ಯಾಯಾಲಯ ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಲಿದೆ.

ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಹಾಗೂ ಗುಜರಾತ್ ಮುಖ್ಯ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಿಸಲಾಗಿದೆ. ಒಂದೆರಡು ದಿನಗಳಲ್ಲೇ ಅವರು ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆ ಇದೆ.

# ಅಭಿವೃದ್ಧಿ ನೆಪದಲ್ಲಿ ಪರಿಸರ ನಾಶ-ಮನುಕುಲದ ವಿನಾಶ

### ಹೊನ್ನಾಳಿ ಕಾರ್ಯಕ್ರಮದಲ್ಲಿ ಸಾಲುಮರದ ತಿಮ್ಮಕ್ಕ ವ್ಯಾಕುಲತೆ



ಹೊನ್ನಾಳಿ, ಫೆ. 10- ಅಭಿವೃದ್ಧಿಯ ನೆಪದಲ್ಲಿ ಪರಿಸರ ನಾಶವಾಗುತ್ತಿದ್ದು, ಇದರಿಂದ ಮಾನವ ಕುಲಕ್ಕೆ ಮುಂದೆ ಭಾರೀ ಗಂಡಾಂತರ ಎದುರಾಗಲಿದೆ ಎಂದು ವೃಕ್ಷಮಾತೆ, ಪರಿಸರ ರಾಯಭಾರಿ, ಪದ್ಮಶ್ರೀ ನಾಡೋಜ ಸಾಲುಮರದ ತಿಮ್ಮಕ್ಕ ಆಕ್ರೋಶ ವ್ಯಕ್ತಪಡಿಸಿದರು.

ಅವರು ಪಟ್ಟಣದ ದುರ್ಗಿಗುಡಿ 3 ನೇ ಕ್ರಾಸ್‌ನ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಸಸಿ ನೆಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಸ್ತೆ ಮತ್ತಿತರೆ ಕಾಮಗಾರಿಗಳ ಅಭಿವೃದ್ಧಿ ನೆಪದಲ್ಲಿ ಹಲವಾರು ವರ್ಷಗಳಿಂದ ಮರಗಳ ಮಾರಣ ಹೋಮ ನಡೆಯುತ್ತಿದ್ದು ಸರ್ಕಾರವು ತೆರವು ಮಾಡಿದ ಮರಗಳ ಬದಲಾಗಿ ಪರ್ಯಾಯವಾಗಿ ಗಿಡ-ಮರಗಳನ್ನು ಬೆಳೆಸುವತ್ತ ಗಂಭೀರವಾಗಿ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಪರಿಸರ ನಾಶದ ಬಗ್ಗೆ ಆಗಲಿರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು. ಪ್ರತೀ ಗ್ರಾಪಂ ವ್ಯಾಪ್ತಿಯಲ್ಲಿ ಮನೆಗೊಂದು ಮರವನ್ನು ಬೆಳೆಸುವತ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಕೋರಿ ಯೋಗೀಶ್ ಕುಳಗಟ್ಟೆ ಮಾತನಾಡಿ, ಸಾಲುಮರದ ತಿಮ್ಮಕ್ಕ ಅವರು ಹುಲಿಕಲ್ ಮತ್ತು ಕುದೂರು ನಡುವಿನ 45 ಕಿಲೋ ಮೀಟರ್ ಹೆದ್ದಾರಿ ಯುದ್ದಕ್ಕೂ 385 ಆಲದ ಮರಗಳನ್ನು ನೆಟ್ಟು ಪೋಷಿಸುವ ಸಾರ್ಥಕ ಕೆಲಸವನ್ನು ಮಾಡಿದ್ದಾರೆ ಎಂದು ಶ್ಲಾಘಿಸಿದರು.

ತನಗೆ ಮಕ್ಕಳಾಗದಿದ್ದಾಗ ತನ್ನ ಪತಿಯವರ ಸಹಾಯ ಹಸ್ತದೊಂದಿಗೆ 8000 ಕ್ಕೂ ಹೆಚ್ಚು ಇತರೆ ಮರಗಳನ್ನು ನೆಟ್ಟು ಬೆಳೆದ ಮರಗಳಲ್ಲಿ ಮಕ್ಕಳ ಪ್ರತಿ ರೂಪವನ್ನು ನೋಡಿದ ಮಾತೃ ಹೃದಯಿಗೆ ಇತ್ತೀಚೆಗೆ ಸರ್ಕಾರವು ಅವರ ಸೇವಾ ಕಾರ್ಯವನ್ನು ಗುರುತಿಸಿ ಕ್ಯಾಬಿನೆಟ್ ದರ್ಜೆಯ ಸ್ಥಾನ-ಮಾನವನ್ನು ನೀಡಿ ಕರ್ನಾಟಕ ಸರ್ಕಾರದ ಪರಿಸರ ರಾಯಭಾರಿಯನ್ನಾಗಿ ನೇಮಿಸಿರುವುದಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಆರ್ಯಭಟ ಅಬಾಕಸ್ ಅಕಾಡೆಮಿಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಭಾರತೀಯ ಅಯ್ಯಪ್ಪ ಸೇವಾ ಸಂಘದ ರಾಷ್ಟ್ರೀಯ ಅಧ್ಯಕ್ಷ ಬಳ್ಳೂರ್ ಉಮೇಶ್, ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ನ್ಯಾಮತಿ ತಾಲ್ಲೂಕು ಅಧ್ಯಕ್ಷ ಬಿ.ಎಚ್.ಉಮೇಶ್, ರೈತ ಮುಖಂಡರುಗಳಾದ ಎ.ಪಿ. ನಾಗರಾಜಪ್ಪ, ಕೋರಿ ನಂಜಪ್ಪ, ಕೋರಿ ಸೋಮಶೇಖರಪ್ಪ, ಅಗಸೆಬಾಗಿಲ ರಾಜಪ್ಪ, ನ್ಯಾಮತಿ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯ ಮುಖಂಡ ಮಹೇಶ್ ಆಚಾರ್ ಆರುಂಡಿ, ಹಾಲೇಶ್ ನ್ಯಾಮತಿ, ಅಪ್ಪು ಅಭಿಮಾನಿ ಬಳಗದ ಮುಖಂಡ ಜಿ. ಬಸವನಗೌಡ, ಸಮಾಜ ಸೇವಕ ಕಡೆಮನಿ ರಾಮಚಂದ್ರಪ್ಪ, ಸಂಸ್ಥೆಯ ಮಹಿಳಾ ವಿಭಾಗದ ಪದಾಧಿಕಾರಿಗಳಾದ ಅನಿತಾ ಯೋಗೀಶ್, ಪದ್ಮಾ ಹೆಚ್.ಕೆ.ವೀಣಾ ಮತ್ತಿತರರು ಉಪಸ್ಥಿತರಿದ್ದರು.

## ದೈವಜ್ಞ ಬ್ರಾಹ್ಮಣ ಸಮಾಜಕ್ಕೆ ಪ್ರಶಾಂತ್ ವೆರ್ಣೇಕರ್ ಅಧ್ಯಕ್ಷ

### ಕಾರ್ಯದರ್ಶಿಯಾಗಿ ಸತೀಶ್ ಎಸ್. ಸಾನು




ದಾವಣಗೆರೆ,ಫೆ.10- ನಗರದ ದೈವಜ್ಞ ಬ್ರಾಹ್ಮಣ ಸಮಾಜ ಸಂಘದ ಅಧ್ಯಕ್ಷರಾಗಿ ಪ್ರಶಾಂತ್ ವಿಶ್ವನಾಥ್ ವೆರ್ಣೇಕರ್ (ಹೆಗಡೆ) ಮತ್ತು ಕಾರ್ಯದರ್ಶಿಯಾಗಿ ಸತೀಶ್ ಎಸ್. ಸಾನು (ಮುಂಡಗೋಡ) ಆಯ್ಕೆಯಾಗಿದ್ದಾರೆ.

ದೈವಜ್ಞ ಬ್ರಾಹ್ಮಣ ಸಮಾಜ ಸಂಘದ ಆಡಳಿತ ಮಂಡಳಿಗೆ ಈಚೆಗೆ ನಡೆದ ಚುನಾವಣೆಯ ನಂತರ ದೈವಜ್ಞ ಕಲ್ಯಾಣ ಮಂಟಪದಲ್ಲಿ ಇಂದು ಏರ್ಪಾಡಾಗಿದ್ದ ಸಂಘದ ನೂತನ ನಿರ್ದೇಶಕರ ಪ್ರಥಮ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು. ಸಮಾಜದ ನಿರ್ಗಮಿತ ಅಧ್ಯಕ್ಷ ಸತ್ಯನಾರಾಯಣ (2ನೇ ಪುಟಕ್ಕೆ)

## ಮಾ.5ರಂದು ನೀಟ್-ಪಿ.ಜಿ. ಪರೀಕ್ಷೆ

ನವದೆಹಲಿ, ಫೆ. 10 - ಬರುವ ಮಾರ್ಚ್ 5ರಂದು ನಿಗದಿಯಾಗಿ ರುವಂತೆ ನೀಟ್ - ಪಿ.ಜಿ. ಪರೀಕ್ಷೆ ನಡೆಯಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಲೋಕಸಭೆಗೆ ತಿಳಿಸಿದರು.

ನೀಟ್ - ಪಿ.ಜಿ. 2023ರ ಪರೀಕ್ಷೆಯನ್ನು ಕೆಲ ತಿಂಗಳವರೆಗೆ ಮುಂದೂಡುವಂತೆ ಕೆಲ ವಿದ್ಯಾರ್ಥಿಗಳು ಒತ್ತಾಯಿಸಿದ್ದರು. ಈ ಕುರಿತು ಕಾಂಗ್ರೆಸ್ ಸದಸ್ಯ ಗೌರವ್ ಗೊಗೊಯ್ ಅವರು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ್ದರು. ಮಾರ್ಚ್ 5ರಂದು ಪರೀಕ್ಷೆ ನಡೆಸಲಾಗುವುದು ಎಂದು ಐದು ತಿಂಗಳ ಹಿಂದೆ ಘೋಷಿಸಲಾಗಿತ್ತು. ಪರೀಕ್ಷೆಗೆ ವಿದ್ಯಾರ್ಥಿಗಳು ಈಗಾಗಲೇ ಸಿದ್ಧವಾಗಿದ್ದಾರೆ ಎಂದು ಸಚಿವರು ಹೇಳಿದರು.

## ಕಡಿಮೆ ಬೆಲೆಗೆ ಗೋಧಿ ಮಾರಲು ಕೇಂದ್ರದ ನಿರ್ಧಾರ

ನವದೆಹಲಿ, ಫೆ. 10 – ಎಫ್.ಸಿ.ಐ. ಗೋದಾಮುಗಳಿಂದ ಗೋಧಿ ಬಿಡುಗಡೆ ಮಾಡಿದರೂ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಗೋಧಿಯ ಸಾಗಣೆ ವೆಚ್ಚ ಕಡಿತಗೊಳಿಸಿ, ಕ್ವಿಂಟಾಲ್‌ಗೆ 2,350 ರೂ.ಗಳ ಮೀಸಲು ಬೆಲೆಯಲ್ಲೇ ಮಾರಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಸರ್ಕಾರದ ಕ್ರಮದಿಂದಾಗಿ ಎಫ್.ಸಿ.ಐ. ಮೂಲಕ ಸಗಟು ಮಾರಾಟಗಾರರಿಗೆ ಕೆಜಿಗೆ 21.50 ರೂ.ಗಳಂತೆ ಗೋಧಿ ಮಾರಲಾಗುವುದು. ಈ ಹಿಂದೆ ಗೋಧಿಯನ್ನು ಕೆಜಿಗೆ 23.50 ರೂ.ಗಳಂತೆ ಮಾರಲಾಗುತ್ತಿತ್ತು.

# ಪೌರ ಕಾರ್ಮಿಕರಿಗೆ ತೊಂದರೆ ನೀಡಿದರೆ ಕಠಿಣ ಕ್ರಮ

## ಅಧಿಕಾರಿಗಳಿಗೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಕೋಟೆ ಎಚ್ಚರಿಕೆ



ದಾವಣಗೆರೆ, ಫೆ. 10 – ಪೌರ ಕಾರ್ಮಿಕರಿಗೆ ಅಧಿಕಾರಿಗಳು ತೊಂದರೆ ನೀಡಿದಲ್ಲಿ ಅವರ ವಿರುದ್ಧ ಕ್ರಮ, ದಂಡ ಹಾಗೂ ಜೈಲು ಶಿಕ್ಷೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಪೌರ ಕಾರ್ಮಿಕರ ವಿಷಯದಲ್ಲಿ ಆಯೋಗವೇ ಸರ್ವೋಚ್ಚ ಸಂಸ್ಥೆ ಎಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಕೋಟೆ ತಿಳಿಸಿದರು.

ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಅಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ನಗರಾಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದ್ದ ಪೌರ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕಾಯ್ದೆ ಕುರಿತ ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹುಬ್ಬಳ್ಳಿ-ಧಾರವಾಡ ರೈಲ್ವೆ ವಿಭಾಗದಲ್ಲಿ ಇತ್ತೀಚೆಗೆ 150 ಪೌರ ಕಾರ್ಮಿಕರನ್ನು ವಜಾಗೊಳಿಸಲಾಗಿತ್ತು. ಈ ಪ್ರಕರಣ ಹೈಕೋರ್ಟ್‌ಗೆ ಬಂದಾಗ, ಪೌರಕಾರ್ಮಿಕರ ವಿಷಯದಲ್ಲಿ ಸಫಾಯಿ ಕರ್ಮಚಾರಿ ಆಯೋಗವು ಸರ್ವೋಚ್ಚ ನಿರ್ಧಾರಕ ಎಂದು ನ್ಯಾಯಾಲಯ ಹೇಳಿದೆ ಎಂದು ಶಿವಣ್ಣ ತಿಳಿಸಿದರು.

ಪೌರ ಕಾರ್ಮಿಕರಿಗೆ ಸಂಬಂಧಿಸಿದ 350 ಪ್ರಕರಣಗಳ ವಿಚಾರಣೆ ಈಗ ಆಯೋಗದಲ್ಲಿ ನಡೆಯುತ್ತಿದೆ. ಪೌರ ಕಾರ್ಮಿಕರಿಗೆ ಏನೇ ತೊಂದರೆಗಳಾಗಿದ್ದರೂ ಅವರು ಆಯೋಗದಿಂದ ನೆರವು ಪಡೆಯಬಹುದು ಎಂದು ತಿಳಿಸಿದರು.

ನೇರ ಪಾವತಿಯಲ್ಲಿರುವ 26 ಸಾವಿರದಷ್ಟು ಪೌರ ಕಾರ್ಮಿಕರನ್ನು ಈಗ ಎರಡು ಹಂತಗಳಲ್ಲಿ ಖಾಯಂ ಮಾಡಿಕೊಳ್ಳಲಾಗುತ್ತಿದೆ. ಮಾರ್ಚ್ ವೇಳೆಗೆ ಪೌರ ಕಾರ್ಮಿಕರಿಗೂ ಸರ್ಕಾರಿ ನೌಕರರ ರೀತಿಯ ಸೌಲಭ್ಯಗಳು ಸಿಗಲಿವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಹೊರಗುತ್ತಿಗೆ (2ನೇ ಪುಟಕ್ಕೆ)

### ಸೌಲಭ್ಯ ಕೊಡುತ್ತೇವೆ ಎಂದರೂ ಅರ್ಜಿ ಬಂದಿಲ್ಲ

ಬೇರೆ ನಿಗಮಗಳಲ್ಲಿ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಲು ತಿಂಗಳ ಕಾಲ ಮಾತ್ರ ಅವಕಾಶ ನೀಡಲಾಗುತ್ತಿದೆ. ಆದರೆ, ಸಫಾಯಿ ಕರ್ಮ ಚಾರಿ ನಿಗಮದಲ್ಲಿ ನಾಲ್ಕೂವರೆ ತಿಂಗಳ ಕಾಲಾವಕಾಶ ನೀಡಿದರೂ ದಾವಣಗೆರೆ ಜಿಲ್ಲೆಯಿಂದ ಅರ್ಜಿಗಳು ಬಂದಿಲ್ಲ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ್ ಹೇಳಿದರು. ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಕೋಟೆ ಮಾತನಾಡಿ ಪೌರಕಾರ್ಮಿಕರು, ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ಸೌಲಭ್ಯಗಳ ಅರಿವು ಮೂಡಿಸಬೇಕು ಎಂದು ಸೂಚಿಸಿದರು.

### ಜಿಲ್ಲೆಯ ಹತ್ತು ಪೌರ ಕಾರ್ಮಿಕರು ಸಿಂಗಪುರಕ್ಕೆ

ಈ ತಿಂಗಳ ಅಂತ್ಯದಲ್ಲಿ ರಾಜ್ಯದ 350 ಪೌರ ಕಾರ್ಮಿಕರನ್ನು ಸಿಂಗಪುರಕ್ಕೆ ಅಧ್ಯಯನಕ್ಕಾಗಿ ಕಳಿಸಲಾಗುವುದು. ದಾವಣಗೆರೆ ಜಿಲ್ಲೆಯಿಂದ ಹತ್ತು ಪೌರ ಕಾರ್ಮಿಕರು ವಿದೇಶ ಅಧ್ಯಯನ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಕೋಟೆ ಹೇಳಿದರು.

# ಹಡಗಲಿ : ವೈಭವದ ಗವಿಸಿದ್ದೇಶ್ವರ ತೇರು



ಹೂವಿನಹಡಗಲಿ, ಫೆ. 10 - ಗವಿಸಿದ್ದೇಶ್ವರ ರಥೋತ್ಸವ ಸಹಸ್ರಾರು ಭಕ್ತ ಸಮೂಹದ ನಡುವೆ ವೈಭವದಿಂದ ನೆರವೇರಿತು. ರಥೋತ್ಸವಕ್ಕೆ ಶಾರದಮ್ಮ ಈಟಿ ಶಂಭುನಾಥ್ ಚಾಲನೆ ನೀಡಿದರು. ನಾಡಿನ ಹರ ಗುರು ಚರಮೂರ್ತಿಗಳು ರಥೋತ್ಸವದಲ್ಲಿ ಪಾಲ್ಗೊಂಡು ಶುಭ ಹಾರೈಸಿದರು.

ಮಠದಿಂದ ಧಾರ್ಮಿಕ ಸಂಪ್ರದಾಯದಂತೆ ಸಮಾಳ, ನಂದಿಕೋಲು ವಿವಿಧ ವಾದ್ಯಗಳೊಂದಿಗೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಗವಿಸಿದ್ದೇಶ್ವರರ ಬೆಳ್ಳಿ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡುತ್ತಾ ರಥೋತ್ಸವದಲ್ಲಿ ಪ್ರತಿಷ್ಠಾಪಿಸಲಾಯಿತು.

ಬಳಿಕ ಡಾ. ಹಿರಿ ಶಾಂತವೀರ ಮಹಾಸ್ವಾಮಿಗಳು ರಥೋತ್ಸವಕ್ಕೆ ಪೂಜೆ ಸಲ್ಲಿಸಿದ ಬಳಿಕ ಪಟಾಕಿ ಹರಾಜು ನಡೆಯಿತು. ಬಿಜೆಪಿ ಮುಖಂಡ ಓದೋ ಗಂಗಪ್ಪ ಅವರು 1,90,000 ರೂ.ಗಳಿಗೆ ಹರಾಜಿನಲ್ಲಿ ಪಡೆದರು. ಜಂಗಮ ವಟುಗಳಿಗೆ ಶಿವ ದೀಕ್ಷೆ ಅಯ್ಯಾಚಾರ ನಡೆಯಿತು.

ನಂತರ ಸಾಮೂಹಿಕ ವಿವಾಹಗಳು ನೆರವೇರಿದವು. (2ನೇ ಪುಟಕ್ಕೆ)

# ಆಧುನಿಕ ಯುಗದಲ್ಲಿ ಶಿಕ್ಷಣ ಅತ್ಯಂತ ಪ್ರಬಲ ಅಸ್ತ್ರ

ರಾಣೇಬೆನ್ನೂರು, ಫೆ. 10- ಆಧುನಿಕ ಯುಗದಲ್ಲಿ ಶಿಕ್ಷಣ ಎಂಬುದು ಅತ್ಯಂತ ಪ್ರಬಲವಾದ ಅಸ್ತ್ರ. ನಾವು ಅದನ್ನು ಪಡೆಯದ ಹೊರತು ಯಶಸ್ಸಿನ ಶಿಖರವನ್ನು ಏರಲು ಸಾಧ್ಯವಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ದಾಪುಗಾಲು ಹಾಕಬೇಕಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಪಟ್ಟಣದ ಬಿ.ಆರ್. ತಂಬಾಕದ ಪ್ರಥಮ ದರ್ಜೆ ಮಹಾವಿದ್ಯಾಲಯ, ಸ್ನಾತಕೋತ್ತರ (ಎಂ.ಕಾಂ) ಅಧ್ಯಯನ ಕೇಂದ್ರದ ಸಂಯುಕ್ತ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಯುಜಿ, ಪಿಜಿ ಹಾಗೂ ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕಲಿಕಾರ್ಥಿ ಸಹಾಯಕ ಕೇಂದ್ರ ಮತ್ತು 2022-23 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ರಾಷ್ಟ್ರದ ಪ್ರತಿಯೊಂದು ಕ್ಷೇತ್ರದ ಅಭಿವೃದ್ಧಿಯ ಮೂಲವೇ ಶಿಕ್ಷಣ. ಮನುಷ್ಯನಿಗೆ ಮಾನಸಿಕ ಮತ್ತು ಬೌದ್ಧಿಕ ಸಂಸ್ಕಾರ ನೀಡುವ ಮೂಲಕ ಮಾನವೀಯತ್ವ ಪ್ರಾಪ್ತವಾಗಲು ಮೂಲ ಕಾರಣವೇ ಶಿಕ್ಷಣ. ಇದರಲ್ಲಿ ಸಾಮಾನ್ಯ ಶಿಕ್ಷಣ ಹಾಗೂ ಉನ್ನತ ಶಿಕ್ಷಣದ ಪಾತ್ರವು ಹಿರಿದಾದುದಾಗಿದೆ. ಮೂಲಭೂತ ಶಿಕ್ಷಣದ ಜೊತೆಯಲ್ಲಿಯೇ ಪ್ರತಿಯೊಂದು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಯು ಆಯಾ ರಾಷ್ಟ್ರದ ಉನ್ನತ ಶಿಕ್ಷಣದ ವ್ಯವಸ್ಥೆ, ಗುಣಮಟ್ಟ, ಸುಶಿಕ್ಷಿತರ ಪ್ರಮಾಣ ಮೊದಲಾದುವುಗಳ ಮೇಲೆ ಅವಲಂಬಿತವಾಗಿರುತ್ತದೆ ಎಂದರು.



**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್**

ಮುಖ್ಯಮಂತ್ರಿಗಳು ಸರ್ವಜ್ಞ ಪ್ರಾಧಿಕಾರದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು 25 ಕೋಟಿ ಅನುದಾನಕ್ಕೆ ಸಂಪುಟದಲ್ಲಿ ಒಪ್ಪಿಗೆ ನೀಡುವ ಮೂಲಕ, ಈ ಭಾಗದ ಬಹುದಿನದ ಬೇಡಿಕೆಯನ್ನು ಈಡೇರಿಸಿದ್ದಾರೆ ಎಂದು ಸಂತಸ ಹಂಚಿಕೊಂಡರು.

ಐಬಿಎಂಆರ್ ಸಮೂಹ ಸಂಸ್ಥೆಗಳ ಫೌಂಡರ್ ಚೇರ್‌ಮನ್ ಡಾ. ವಿನಯಚಂದ್ರ ಮಹೇಂದ್ರಕರ್ ಮಾತನಾಡಿ, ವಿಶೇಷವಾದ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸುವುದರ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಪೂರಕ ಕೊಡುಗೆಯನ್ನು ನೀಡುವ ಶಿಕ್ಷಣವಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಮೂಲಕ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಪ್ರಜಾಪ್ರಭುತ್ವ ಹಾಗೂ ರಾಷ್ಟ್ರದ ಬಗೆಗಿನ ಹಿತ. ಆಸ್ಥೇಯ ರಾಷ್ಟ್ರೀಯತೆಯ ಆಲೋಚನೆಗಳನ್ನು ಸಕಾರಾತ್ಮಕವಾಗಿ ಆಚರಣೆಗೊಳ್ಳುವತ್ತ ಗಮನಹರಿಸುವುದು ಇಂದಿನ ಬದಲಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶಕ್ಕೆ ಅಗತ್ಯ ಅನಿವಾರ್ಯವಾಗಿರುವುದನ್ನು ಕಾಣಬಹುದು ಎಂದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಎಸ್.ಎಸ್. ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೆಚ್.ಟಿ. ವಿ.ಎಸ್.ಎಸ್. ಅಧ್ಯಕ್ಷ ಎಸ್.ಬಿ. ತಿಮ್ಮಪ್ಪ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಡಾ. ಕೆ.ವಿ. ಸುರೇಶ್, ಡಾ.ಹೆಚ್.ಬಿ. ರಂಜಿತ್‌ಕುಮಾರ್, ಎಸ್. ವೀರಭದ್ರಯ್ಯ, ಎಂ.ವಿ. ಹೊಂಬರಡಿ, ಜೆ.ಬಿ. ತಂಬಾಕದ, ಏಕೇಶಣ್ಣ ಬಣಕಾರ, ರವಿಶಂಕರ ಬಾಳಿಕಾಯಿ, ಶೈಕಣ್ಣ ತಿಮ್ಮಿನಕಟ್ಟಿ, ಜೆ.ವಿ. ಅಂಗಡಿ, ಯು.ಎಸ್. ಕಳಗೊಂಡದ, ಬಿ.ಪಿ. ಹಳ್ಳೇರ, ಹೆಚ್.ಪಿ. ನಾಗರಾಜ್, ಸಿ.ಆರ್. ದೂದೀಹಳ್ಳಿ, ಹರೀಶ್ ಆರ್ಕಾಚಾರ್, ಸತೀಶ್ ಬಣಕಾರ ಮತ್ತಿತರರಿದ್ದರು.

ಎಸ್.ಎಸ್. ಹುಲ್ಲಿನಕೊಪ್ಪ, ಆಸಿಯಾ ದೌಲತಕೋಟಿ ಕಾರ್ಯಕ್ರಮ ನಿರೂಪಿಸಿದರು.

# ದೇವಸ್ಥಾನಗಳಲ್ಲಿ ಧಾರ್ಮಿಕತೆ ನೆಲೆಸುವಂತೆ ನೋಡಿಕೊಳ್ಳಬೇಕು

ಹೊನ್ನಾಳಿ, ಫೆ. 10- ದೇವಸ್ಥಾನಗಳನ್ನು ನಿರ್ಮಿಸಿದರೆ ಸಾಲದು, ಅಲ್ಲಿ ಸ್ವಚ್ಛತೆ, ಧಾರ್ಮಿಕತೆ, ನೆಲೆಸುವಂತೆ ನೋಡಿಕೊಳ್ಳಬೇಕು. ಎಲ್ಲಿ ಸ್ವಚ್ಛತೆ, ಶಾಂತಿ, ಧಾರ್ಮಿಕತೆಗಳಿರುತ್ತವೆಯೋ ಅಲ್ಲಿ ದೈವತ್ವ ನೆಲೆಸಿರುತ್ತದೆ ಎಂದು ಹಿರೇಕಲ್ಮಠದ ಡಾ. ಒಡೆಯರ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ದೊಡ್ಡಗಣ್ಣಾರ ಕೇರಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಕರಿಸಿದ್ದೇಶ್ವರ ಸ್ವಾಮಿ ದೇವಸ್ಥಾನದ ಗೃಹ ಪ್ರವೇಶ, ಮೂರ್ತಿಗಳ ಪ್ರತಿಷ್ಠಾಪನೆ, ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಎಲ್ಲಿ ದೇವರು, ಗುರುಗಳ ಬಗ್ಗೆ ಶಕ್ತಿ ನೆಲೆಸಿರುತ್ತದೆಯೋ, ಅಲ್ಲಿ ನೆಮ್ಮದಿಯೂ ಇರುತ್ತದೆ. ದೇವಸ್ಥಾನಗಳನ್ನು ಧಾರ್ಮಿಕ ಆಚರಣೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುತ್ತಾ ದೇವಸ್ಥಾನಗಳನ್ನು ಶ್ರದ್ಧಾಭಕ್ತಿಗಳ ಶಕ್ತಿ ಕೇಂದ್ರಗಳನ್ನಾಗಿ ಬೆಳೆಸಬೇಕು ಎಂದು ಹೇಳಿದರು.

ಕುರುಬ ಸಮಾಜದ ಮುಖಂಡ ಹಾಗೂ ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ ಮಾತನಾಡಿ, ದೇವಸ್ಥಾನಗಳನ್ನು ಕೇವಲ ಒಂದು ಜಾತಿ, ಧರ್ಮಕ್ಕೆ ಸೀಮಿತಗೊಳಿಸಿದೇ ಎಲ್ಲಾ ವರ್ಗಗಳ ಜನ ಭಕ್ತಿಯಿಂದ ನಡೆದುಕೊಳ್ಳಬೇಕು. ಬಹುತೇಕ ಬಡವರು, ಶ್ರಮಿಕರು ಹೆಚ್ಚಾಗಿರುವ ಈ ಜಾಗದಲ್ಲಿ ತಮ್ಮ ಶ್ರಮದ ಸ್ವಲ್ಪ ಜಾಗವನ್ನು ದೇವರಿಗಾಗಿ ದಾನ ಮಾಡುವ ದೊಡ್ಡ ಮನೋಭಾವನೆ ಹೊಂದಿರುವುದು ಸಂತಸದ ಸಂಗತಿ ಎಂದು ಹೇಳಿದರು.



**ಹೊನ್ನಾಳಿ ಹಿರೇಕಲ್ಮಠದ ಶ್ರೀಗಳು**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುರುಬ ಸಮಾಜದ ಹಿರಿಯ ಆಪಿನಕಟ್ಟೆ ರಾಜಪ್ಪ ವಹಿಸಿದ್ದರು. ಯುವ ಮುಖಂಡ ಎಚ್.ಎ.ರಂಜಿತ್ ಸೇರಿದಂತೆ, ಅನೇಕ ಮುಖಂಡರು ಭಾಗವಹಿಸಿದ್ದರು. ದೇವಸ್ಥಾನ ನಿರ್ಮಾಣಕ್ಕಾಗಿ ಸೇವೆ ಸಲ್ಲಿಸಿದವರನ್ನು ಹಾಗೂ ಸಮಾಜದ ಹಿರಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

## ಶಾಲಾ ಜಾಗ, ರಸ್ತೆ ರಿಪೇರಿಗೆ ಸತ್ಯಾಗ್ರಹ



**ಹರಿಹರ**

ಹರಿಹರ, ಫೆ. 10 - ತಾಲ್ಲೂಕಿನ ಗಂಗನರಸಿ ಗ್ರಾಮದ ಸರ್ವೆ ನಂಬರ್ 52 ರಲ್ಲಿನ 2 ಎಕರೆ 24 ಗುಂಟೆ ಪ್ರದೇಶದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವ್ಯಾಪ್ತಿಗೆ ಸೇರಿದ ಪ್ರದೇಶವನ್ನು ಹದ್ದುಬಸ್ತು ಮಾಡಿಕೊಡಬೇಕು ಮತ್ತು ಹರಿಹರ ನಗರ ವ್ಯಾಪ್ತಿಗೆ ಒಳಪಟ್ಟ ಬೀರೂರು - ಸಮ್ಮಸಗಿ ಹೆದ್ದಾರಿ ಹಳೆ ಪಿ.ಬಿ. ರಸ್ತೆಯ ರಾಘವೇಂದ್ರ ಮಠದ ಜೋಡಿ ಸೇತುವೆಯ ಸಮೀಪ ಹದಗೆಟ್ಟು ಹೋಗಿರುವ ರಸ್ತೆಯನ್ನು ಸರಿಪಡಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಕಚೇರಿಯ ಮುಂಭಾಗದ ಆವರಣದಲ್ಲಿ ನಗರದ ಜಯ ಕರ್ನಾಟಕ ಸಂಘಟನೆ ತಾಲ್ಲೂಕು ಘಟಕದ ವತಿಯಿಂದ ಉಪವಾಸ ಸತ್ಯಾಗ್ರಹ ಮಾಡಲಾಗುತ್ತಿದೆ.

ಈ ಉಪವಾಸ ಸತ್ಯಾಗ್ರಹದಲ್ಲಿ ಜಯ ಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಎಸ್ ಗೋವಿಂದ, ಉಪಾಧ್ಯಕ್ಷ ಆನಂದ್ ಎಂ. ಆರ್., ಪ್ರಧಾನ ಕಾರ್ಯದರ್ಶಿ ಸುನಿಲ್ ಸಿ.ಹೆಚ್. ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀನಿವಾಸ್, ವಿಜಯ್ ಪೈ, ಕಾಂತ ನಂದಿಗುಡಿ, ಶಿವು, ನಿಂಗರಾಜ್, ಆಟೋ ಶಬರೀಶ್, ಗಣೇಶ್, ಅಮರ್, ನಿರಂಜನ್ ಭಾಗಿಯಾಗಿದ್ದರು.

## ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದ ಹುಂಡಿಯಲ್ಲಿ 39 ಲಕ್ಷ ರೂ. ಸಂಗ್ರಹ

ಕೊಟ್ಟೂರು, ಫೆ. 10 - ಪಟ್ಟಣದ ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನದ ಕಾಣಿಕೆ ಹುಂಡಿಯಲ್ಲಿ 39,46,080 /- ರೂ. ಸಂಗ್ರಹವಾಗಿದೆ ಎಂದು ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಯು.ಎಂ.ಪ್ರಕಾಶರಾವ್ ತಿಳಿಸಿದರು. ದೇವಸ್ಥಾನದ ಕಾರ್ಯಾಲಯದಲ್ಲಿ ಹುಂಡಿ ಏಣಿಕೆ ಕಾರ್ಯ ನಡೆಯಿತು. ಒಟ್ಟು ಹುಂಡಿಗಳಲ್ಲಿ ಎರಡು ತಿಂಗಳುಗಳ ಹಣ ಸಂಗ್ರಹವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಧಾರ್ಮಿಕ ದತ್ತಿ ಇಲಾಖೆ ಇಓ ಬಿ.ಎಂ. ಕೃಷ್ಣಪ್ಪ, ಪೊಲೀಸ್ ಇಲಾಖೆಯವರು, ತಾಲ್ಲೂಕು ಆಡಳಿತ ಕಚೇರಿ ಅಧಿಕಾರಿಗಳು, ಧರ್ಮಕರ್ತರು, ಸಿ.ಎಚ್.ಎಂ ಗಂಗಾಧರಯ್ಯ, ಸೋಮಶೇಖರ್ ಗೌಡ, ಸೋಮನಾಥ್ ಪಟೇಲ್, ಶಿವಕುಮಾರ್ ಗೌಡ, ಪ್ರದೀಪ್, ಕಾರ್ತಿಕ್, ಕರ್ನಾಟಕ ಪ್ರಗತಿ ಗ್ರಾಮೀಣ ಬ್ಯಾಂಕ್ ಅಧಿಕಾರಿ ಶಿವರಾಜ್ ಕುಮಾರ್, ದ್ರಾಕ್ಷಾಯಿಣಿ ಹಾಗೂ ಸಿಬ್ಬಂದಿ, ಕಾಲೇಜ್ ವಿದ್ಯಾರ್ಥಿಗಳು, ಆಯಗಾರ ಬಳಗದ ಕೆಂಪಳ್ಳಿ ಗುರುಸಿದ್ಧನಗೌಡ, ಕೆ.ಎಸ್.ನಾಗರಾಜ್ ಗೌಡ, ಕಟ್ಟಿಮನಿ ದೈವಸ್ಥರು ಮುಂತಾದವರು ಪಾಲ್ಗೊಂಡಿದ್ದರು.



## ಇಸ್ರೋದ ಸಣ್ಣ ಉಪಗ್ರಹಗಳ ರಾಕೆಟ್ ಯಶಸ್ವಿ

ಶ್ರೀಹರಿಕೋಟ, ಫೆ. 10 - ಸಣ್ಣ ಉಪಗ್ರಹ ಉಡಾವಣಾ ರಾಕೆಟ್ ವಿಭಾಗದಲ್ಲಿ ಇಸ್ರೋ ಮೊದಲ ಯಶಸ್ಸು ಗಳಿಸಿದೆ. ಇಸ್ರೋದ ಎಸ್‌ಎಸ್‌ಎಲ್‌ವಿ ಡಿ2 ರಾಕೆಟ್ ಮೂಲಕ ಮೂರು ಉಪಗ್ರಹಗಳ ಉಡಾವಣೆ ಮಾಡಲಾಗಿದೆ. ಮೂರು ತಿಂಗಳ ಹಿಂದೆ ನಡೆಸಲಾದ ಮೊದಲ ಉಡಾವಣೆ ನಿರೀಕ್ಷಿತ ಫಲ ನೀಡಿರಲಿಲ್ಲ. ಶುಕ್ರವಾರ ನಡೆಸಲಾದ ಉಡಾವಣೆಯಲ್ಲಿ ಇಸ್ರೋದ ಭೂ ಪರಿವೀಕ್ಷಣಾ ಉಪಗ್ರಹ ಸೇರಿದಂತೆ, ಮೂರು ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಗಿದೆ.

ಎರಡನೇ ಪ್ರಯತ್ನದಲ್ಲಿ ಯಶಸ್ಸು ಸಿಕ್ಕ ನಂತರ ನಿರಾಳವಾದಂತಿದ್ದ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್, ಭಾರತದ ಬಾಹ್ಯಾಕಾಶ ಸಮುದಾಯಕ್ಕೆ ಅಭಿನಂದಿಸುವುದಾಗಿ ಹೇಳಿದರು.

2018ರಲ್ಲಿ ಸಣ್ಣ ಉಪಗ್ರಹಗಳ ರಾಕೆಟ್ ಯೋಜನೆ ಆರಂಭಿಸಲಾಗಿತ್ತು. ಆ ಯೋಜನೆ ಈಗ ದಡ ಸೇರಿದೆ. ಈ ಅವಧಿಯಲ್ಲಿ ಕೊರೊನಾ ಸೇರಿದಂತೆ ಹಲವಾರು ತೊಡಕುಗಳು ಎದುರಾಗಿದ್ದವು. 34 ಮೀಟರ್ ಎತ್ತರದ ಎಸ್‌ಎಸ್‌ಎಲ್‌ವಿ ಉಡಾವಣೆಯನ್ನು ಬೆಳಿಗ್ಗೆ 9.18ಕ್ಕೆ ನೆರವೇರಿಸಲಾಯಿತು. ಈ ರಾಕೆಟ್ 10ರಿಂದ 500 ಕೆ.ಜಿ. ತೂಕದ ಉಪಗ್ರಗಳ ಉಡಾವಣೆ ಮಾಡಬಲ್ಲದು. ಬೇಡಿಕೆ ಬಂದಾಗ ಈ ರಾಕೆಟ್ ಜೋಡಣೆ ಮಾಡಿ ಉಡಾವಣೆ ಮಾಡಲಾಗುವುದು. ಇದರಿಂದಾಗಿ ಉಡಾವಣಾ ವೆಚ್ಚ ಕಡಿಮೆಯಾಗಲಿದೆ.



**2ನೇ ಪ್ರಯತ್ನದಲ್ಲಿ ಬಾಹ್ಯಾಕಾಶ ಸಂಸ್ಥೆಗೆ ನಿರೀಕ್ಷಿತ ಫಲ**

## ಸಾಚಾರ್ ಸಮಿತಿ ಜಾರಿಗೆ ತರಲು ಖಾಸಗಿ ಮಸೂದೆ

ನವದೆಹಲಿ, ಫೆ. 10 – ಮುಸ್ಲಿಮರಿಗೆ ಸಂಬಂಧಿಸಿದಂತೆ ಸಾಚಾರ್ ಸಮಿತಿ ಹಾಗೂ ಇತರೆ ಸಮಿತಿಗಳು ನೀಡಿರುವ ವರದಿಗಳನ್ನು ಜಾರಿಗೆ ತರುವಂತೆ ರಾಜ್ಯಸಭೆಯಲ್ಲಿ ಖಾಸಗಿ ಸದಸ್ಯರ ಮಸೂದೆ ಮಂಡಿಸಲಾಗಿದೆ.

ಇಂಡಿಯನ್ ಯೂನಿಯನ್ ಮುಸ್ಲಿಮ್ ಲೀಗ್‌ನ ಅಬ್ದುಲ್ ವಹಾಬ್ ಅವರು ಖಾಸಗಿ ಸದಸ್ಯರ ಮಸೂದೆಯನ್ನು ಮಂಡಿಸಿದ್ದಾರೆ.

2006ರಲ್ಲಿ ಸಾಚಾರ್ ಸಮಿತಿ ವರದಿ ಹಾಗೂ 2007ರಲ್ಲಿ ರಂಗನಾಥ ಮಿಶ್ರ ಆಯೋಗದ ವರದಿ ಸಲ್ಲಿಸಲಾ ಗಿತ್ತು. ದೇಶದಲ್ಲಿ ಮುಸ್ಲಿಮರ ಪರಿಸ್ಥಿತಿ ಪರಿಶಿಷ್ಟರಿಗಿಂತ ತಳ ಮಟ್ಟದಲ್ಲಿದೆ ಎಂದು ಈ ವರದಿಗಳಲ್ಲಿ ತಿಳಿಸಲಾಗಿತ್ತು ಎಂದು ವಹಾಬ್ ಹೇಳಿದರು.

ದೇಶದ ಒಟ್ಟು ಮಕ್ಕಳಲ್ಲಿ ಮುಸ್ಲಿಮ್ ಮಕ್ಕಳ ಸಂಖ್ಯೆ ಶೇ.14ರಷ್ಟಿದೆ. ಆದರೆ, ಉನ್ನತ ಶಿಕ್ಷಣದಲ್ಲಿ ಅವರ ಪಾಲು ಕೇವಲ ಶೇ.5.5ರಷ್ಟಿದೆ ಎಂದವರು ಹೇಳಿದರು. ಆದರೆ, ಮಸೂದೆಯನ್ನು ವಿರೋಧಿಸುವು ದಾಗಿ ಹೇಳಿದ ಬಿಜೆಪಿಯ ಜಿ.ವಿ.ಎಲ್. ನರಸಿಂಹ ರಾವ್, ಸಾಚಾರ್ ಸಮಿತಿ ವರದಿ ಕೋಮುವಾದಿ ಪ್ರಕ್ರಿಯೆಯಾಗಿದೆ. ಇದು ಅಲ್ಪಸಂಖ್ಯಾತ ರಾಜಕಾರಣದ ಪ್ರತಿ ಬಿಂಬ ಹಾಗೂ ರಾಜಕೀಯ ಓಲೈಕೆ ಎಂದರು. ಇದು ವೋಟ್ ಬ್ಯಾಂಕ್ ರಾಜ ಕಾರಣದ ಪ್ರಯತ್ನ. ಇದು ಢೋಂಗಿ ಸೆಕ್ಯು ಲರ್ ವಾದಕ್ಕೆ ಉದಾಹರಣೆ ಎಂದರು.

## ತೊಂದರೆ ನೀಡಿದರೆ ಕ್ರಮ

**(1ನೇ ಪುಟದಿಂದ)** ಪದ್ಧತಿಯನ್ನು ಸಂಪೂರ್ಣ ರದ್ದು ಮಾಡಿ, ಎಲ್ಲಾ ಪೌರ ಕಾರ್ಮಿಕರನ್ನು ನೇರ ಪಾವತಿಗೆ ತರಲಾಗುವುದು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ. ವೆಂಕಟೇಶ್, ಪೌರ ಕಾರ್ಮಿಕರು ಸ್ವಂತ ಕಾಲ ಮೇಲೆ ನಿಲ್ಲಲು ನಿಗಮದಿಂದ ಎಂಟು ಯೋಜನೆಗಳನ್ನು ರೂಪಿಸಲಾಗಿದೆ ಎಂದರು.

**ಮಾದರಿ ವಿಶ್ರಾಂತಿ ಗೃಹ**

**ಪೌರ ಕಾರ್ಮಿಕರಿಗಾಗಿ ಮಾದರಿ ವಿಶ್ರಾಂತಿ ಗೃಹಗಳನ್ನು ರೂಪಿಸಲಾಗುವುದು. ಎಲ್ಲೆಡೆ 25-30 ಲಕ್ಷ ರೂ. ವೆಚ್ಚದ ಏಕ ರೂಪದ ವಿಶ್ರಾಂತಿ ಗೃಹ ಸ್ಥಾಪಿಸಲು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಕೋಟೆ ತಿಳಿಸಿದರು.**

ನೇರ ಸಾಲ, ಸಣ್ಣ ಉದ್ಯಮಗಳಿಗೆ ಸಾಲ, ಗಂಗಾ ಕಲ್ಯಾಣ ಯೋಜನೆ, ಟ್ಯಾಬ್ ವಿತರಣೆ ಮತ್ತಿತರೆ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನಿಗಮದ ಕ್ಯಾಲೆಂಡರ್ ಹಾಗೂ ಸೌಲಭ್ಯಗಳ ಮಾಹಿತಿಯ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು. ವೇದಿಕೆಯ ಮೇಲೆ ಮೇಯರ್ ಆರ್. ಜಯಮ್ಮ ಗೋಪಿನಾಯ್ಕ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಪಾಲಿಕೆ ಆಯುಕ್ತೆ ರೇಣುಕಾ, ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಕೃಷ್ಣಾ ನಾಯಕ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ. ರಮೇಶ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಕೆ. ನಾಗರಾಜ, ಜಿಲ್ಲಾ ಜಾಗೃತಿ ಸಮಿತಿಯ ಉಚ್ಚಂಗೆಪ್ಪ, ಶಂಕರ್, ಮಂಜಮ್ಮ, ಲಕ್ಷ್ಮಿ, ಪೌರ ಕಾರ್ಮಿಕರ ಮುಖಂಡರಾದ ಎಲ್.ಎಂ. ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ನಗರಾಭಿವೃದ್ಧಿ ಕೋಶಾಧಿಕಾರಿ ಎನ್. ಮಹಾಂತೇಶ್ ಸ್ವಾಗತಿಸಿದರೆ, ಗಂಗಾಧರ ನಿಟ್ಟೂರು ನಿರೂಪಿಸಿದರು.

# ಮಲೇಬೆನ್ನೂರಿನ ಕೊಮಾರನಹಳ್ಳಿ : ಧಾರ್ಮಿಕ ಪ್ರವಚನ ಮಂದಿರ ಉದ್ಘಾಟನೆ



ಮಲೇಬೆನ್ನೂರು, ಫೆ.10- ನಿಸ್ವಾರ್ಥ ಸಮಾಜ ಸೇವೆ ಮಾಡುವ ಮೂಲಕ ಮಾತ್ರ ದೇವರನ್ನು ನೋಡಲು ಸಾಧ್ಯ ಎಂದು ಕರ್ನಾಟಕ ಬ್ಯಾಂಕ್ ಎಂ.ಡಿ.ಎಂ.ಎಸ್. ಮಹಾಬಲೇಶ್ವರ ಹೇಳಿದರು.

ಕೊಮಾರನಹಳ್ಳಿ ರಂಗನಾಥಾಶ್ರಮದಲ್ಲಿ ಬ್ಯಾಂಕಿನ ಸಹಕಾರದಿಂದ ನಿರ್ಮಿಸಿದ 'ಧಾರ್ಮಿಕ ಪ್ರವಚನ ಮಂದಿರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮನುಷ್ಯನಾಗಿ ಹುಟ್ಟಿದ ಮೇಲೆ ಏನನ್ನಾದರೂ ಸಾಧಿಸದಿದ್ದರೆ ಜೀವನ ವ್ಯರ್ಥ ಹಾಗೂ ಸಾವಿಗೆ ಅವಮಾನ ಮಾಡಿದಂತೆ. ಜೀವ ಮಣ್ಣಿಗೆ ಸೇರುವ ಮುನ್ನ ಗುರುವಿನ ಮಾರ್ಗದರ್ಶನ ಪಡೆದು ಗುರಿ ಸಾಧಿಸಿ ಎಂದು ಕಿವಿಮಾತು ಹೇಳಿದರು.

ಶಿವಮೊಗ್ಗ ವಲಯದ ಎ.ಜಿ.ಎಂ. ಹಯವದನ ಉಪಾಧ್ಯಾಯ ಮಾತನಾಡಿ ಬ್ಯಾಂಕ್, ಆರೋಗ್ಯ ಕ್ಷೇತ್ರ, ಶಾಲಾ ಕೊಠಡಿ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ, ಆಂಬ್ಯುಲೆನ್ಸ್, ಕೆರೆಕಟ್ಟೆ ಜೀರ್ಣೋದ್ಧಾರಕ್ಕೆ ಧನ ಸಹಾಯ ಮಾಡಿದೆ ಎಂದರು.

ಶಂಕರಲಿಂಗ ಭಗವಾನ್ ಸರಸ್ವತಿ ಪರಮಹಂಸ ಟ್ರಸ್ಟ್ ಅಧ್ಯಕ್ಷ ಗಣೇಶ್‌ರಾವ್ ಅಧ್ಯಕ್ಷತೆ ವಹಿಸಿದ್ದರು. ಹೊನ್ನಾಳಿ ಉಮಾಕಾಂತ್ ಜೋಯ್ಸ್, ಕುಮಾರ್ ಸ್ವಾಮಿ ಜೋಯ್ಸ್‌ಘೋಷ ಮಾಡಿದರು. ಡಿ.ಎಸ್. ಶೇಷಾದ್ರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಸ್. ಗುರುರಾಜರಾವ್ ಸ್ವಾಗತಿಸಿದರು. ರವಿಕುಮಾರ್ ವಂದಿಸಿದರು.

## ಸಾಧನೆಗಳ ವಿವರ

**(1ನೇ ಪುಟದಿಂದ)** ಇತರೆ ಪ್ರದೇಶಗಳನ್ನು ಹೊರತುಪಡಿಸಲಾಗಿದೆ ಎಂದು ತಿಳಿಸಿದರು. ರೈತಶಕ್ತಿ ಯೋಜನೆಯಡಿ ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಪ್ರತಿ ಎಕರೆಗೆ 250 ರೂಪಾಯಿಗಳಂತೆ ಗರಿಷ್ಠ ಐದು ಎಕರೆಗೆ ಡೀಸೆಲ್ ಸಹಾಯಧನ ನೀಡುತ್ತಿದ್ದು, ಇದಕ್ಕಾಗಿ, 400 ಕೋಟಿ ರೂಪಾಯಿಗಳನ್ನು ಒದಗಿಸಿದ್ದು, 386.98 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಇದರಿಂದ 53.22 ಲಕ್ಷ ರೈತರಿಗೆ ಅನುಕೂಲವಾಗಿದೆ ಎಂದು ರಾಜ್ಯಪಾಲರು ತಿಳಿಸಿದರು.

ನೀರಾವರಿ ಕ್ಷೇತ್ರದಲ್ಲಿ ಯೋಜನೆಗಳನ್ನು ಕೈಗೊಂಡಿದೆ. ಇದರ ಭಾಗವಾಗಿ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಯ 2.25 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಒದಗಿಸುವುದು ಮತ್ತು 367 ಕೆರೆ ತುಂಬಿಸುವ ಭದ್ರಾ ಮೇಲ್ದಂಡ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಮಾನ್ಯತೆ ನೀಡಿ ಕೇಂದ್ರ ಸರ್ಕಾರವು 5,300 ಕೋಟಿ ರೂಪಾಯಿಗಳನ್ನು ಒದಗಿಸಿದೆ ಎಂದವರು ಹೇಳಿದರು.

## ಪ್ರಶಾಂತ್ ವೆರ್ಣೇಕರ್ ಅಧ್ಯಕ್ಷ





**(1ನೇ ಪುಟದಿಂದ)** ಆರ್. ರಾಯ್ಕರ್ ಮತ್ತು ನಿರ್ಗಮಿತ ಕಾರ್ಯದರ್ಶಿ ವಿಠಲ್ ಆವಾಜಿ ಅವರುಗಳು ನೂತನ ಅಧ್ಯಕ್ಷ ಪ್ರಶಾಂತ್ ಹಾಗೂ ನೂತನ ಕಾರ್ಯದರ್ಶಿ ಸತೀಶ್ ಸಾನು ಅವರುಗಳಿಗೆ ಅಧಿಕಾರ ಹಸ್ತಾಂತರಿಸಿ, ಸನ್ಮಾನಿಸಿ ಗೌರವಿಸುವುದರ ಮೂಲಕ ಶುಭ ಹಾರೈಸಿದರು.

ನೂತನ ನಿರ್ದೇಶಕರುಗಳಾದ ಶಂಕರ್ ನಾಗಪ್ಪ ವಿಠಲ್‌ಕರ್ (ಕಚವಿ), ಉಮೇಶ್ ನಾರಾಯಣ ಪುರುಷನ್, ರಾಜೇಶ್ ಪಿ. ರೇವಣಕರ್ (ನಲ್ಲೂರು), ಪಾಂಡುರಂಗ ಶ್ರೀನಿವಾಸ್ ಭಟ್ ಆವಾಜಿ, ಡಿ.ಎನ್. ಸುಬ್ಬರಾವ್ (ಕುಂಬಳೂರು ಸುಬ್ಬಣ್ಣ), ಇ. ನಾಗರಾಜ್ ಅಣಜಿ ಕುಡತರಕರ್ (ಅಡುಗೆ ಕಂಟ್ರಾಕ್ಟರ್), ಮಂಜುನಾಥ ವಿ. ಕುಡತರಕರ್ (ಗಾಲಿ ಮಂಜಣ್ಣ), ಸಾಯಿಪ್ರಕಾಶ್ ಸುಪರ್ ರಾವ್ ವೆರ್ಣೇಕರ್, ರಾಜೀವ್ ವಿ. ವೆರ್ಣೇಕರ್ (ಪಿಬಿವಿ), ಮಂಜುನಾಥ ಆರ್. ಕುರ್ಡೇಕರ್ (ಹರಿಹರ ರಾಮಣ್ಣ), ರಾಘವೇಂದ್ರ ನರಸಿಂಹಪ್ಪ ದಿವಾಕರ್ (ಹಗಡಲಿ), ರಾಘವೇಂದ್ರ ಸುರೇಶ್ ಕುರ್ಡೇಕರ್ (ಆವರ್ಸಾ), ಸಚಿನ್ ಎಸ್. (ವೆರ್ಣೇಕರ್) ಅವರುಗಳು ಸಭಾ ಕಲಾಪದಲ್ಲಿ ಪಾಲ್ಗೊಂಡಿದ್ದರು.

# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ದ್ಯಾಮೇನಹಳ್ಳಿ ಗ್ರಾಮದ ವಾಸಿ
**ಎನ್. ಉಜ್ಜಪ್ಪ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು.
ದಿನಾಂಕ : 08-02-2023ರ ಬುಧವಾರ ರಾತ್ರಿ 9-00 ಗಂಟೆಗೆ
ನನ್ನ ಮೊಮ್ಮಗ, ಶ್ರೀಮತಿ ಮತ್ತು ಶ್ರೀ ಕುಮಾರ್ ಇವರ ಪುತ್ರ

**ಶ್ರೀ ಡಿ. ಕೆ. ಪವನ್**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 12-02-2023ರ ಭಾನುವಾರ ಬೆಳಿಗ್ಗೆ 11-00 ಗಂಟೆಗೆ
ದಾವಣಗೆರೆ ತಾಲ್ಲೂಕು ದ್ಯಾಮೇನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು
ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು :
**ಶ್ರೀಮತಿ ಶಿವಲಿಂಗಮ್ಮ ಎನ್. ಉಜ್ಜಪ್ಪ ಮತ್ತು ಸಹೋದರರು ಹಾಗೂ ಅಳಿಯಂದಿರು**
**ಶ್ರೀಮತಿ ಸುಧಾ ಜಿ.ಯು.ಕುಮಾರ್ ಮತ್ತು ಮಕ್ಕಳು, ಶ್ರೀಮತಿ ಲಕ್ಷ್ಮೀ ಪವನ್**
**ಆಶಾ ರವಿಕುಮಾರ್ ಮತ್ತು ಮಕ್ಕಳು,**
**ಗುರುಸಿದ್ದಪ್ಪರ ವಂಶಸ್ಥರು ಹಾಗೂ ದ್ಯಾಮೇನಹಳ್ಳಿ ಗ್ರಾಮಸ್ಥರು. ಮೊ : 9164866577**

ವಿ.ಸೂ. : ಸಮಯದ ಅಭಾವದ ಕಾರಣ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಹಡಗಲಿ : ಗವಿಸಿದ್ದೇಶ್ವರ ತೇರು

**(1ನೇ ಪುಟದಿಂದ)** ಸಾಮೂ ಹಿಕ ವಿವಾಹದ ಮಾಂಗಲ್ಯ ಸೇವೆಯನ್ನು ಶ್ರೀಮತಿ ಭಾಗ್ಯಮ್ಮ ಪಿ.ವಿಜಯ ಕುಮಾರ್ ಅಧ್ಯಕ್ಷರು, ಕಿತ್ತೂರ್ ರಾಣಿ ಚೆನ್ನಮ್ಮ ಬ್ಯಾಂಕ್ ಹಡಗಲಿ ನೆರವೇರಿಸಿ ದರು. ಕಾಲುಂಗುರ, ಖಡಗ, ದಂಡೆ, ಬಾಸಿಂಗ, ಹೂವಿನ ಹಾರ ಸೇವೆಯನ್ನು ಕರಿಯೆತ್ತಿನ ಪ್ರಕಾಶ್ ಶಾಮಿಯಾನ ಸಪ್ಲೈಯರ್ಸ್ ಇವರು ವಹಿಸಿಕೊಂಡಿದ್ದರು. ರಥೋತ್ಸವಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಬೊಂದೆ ಲಾಡನ್ನು ಶ್ರೀ ಕೃಷ್ಣ ನಾಯಕ್ ಅಭಿಮಾನಿ ಬಳಗದಿಂದ ವಿತರಿಸಲಾಯಿತು.

## ದೇವರಬೆಳಕೆರೆಯಲ್ಲಿ ಇಂದು ತೇರು



ಹರಿಹರ ತಾಲ್ಲೂಕಿನ ದೇವರಬೆಳಕೆರೆ ಗ್ರಾಮದ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿ ರಥೋತ್ಸವವು ಇಂದು ಸಂಜೆ 4 ಗಂಟೆಗೆ ಜರುಗಲಿದೆ.

ನಾಳೆ ಸಂಜೆ 4 ಗಂಟೆಗೆ ಕಾಲಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ನಡೆಯುತ್ತವೆ. ನಂತರ ಓಕಳಿ ಕಾರ್ಯಕ್ರಮ ಜರುಗುವುದು.

## ಶ್ರೀಯುತ ಎಂ.ಎಸ್. ಚಂದ್ರಶೇಖರ್ ನಿಧನ



ದಾವಣಗೆರೆ ತಾಲ್ಲೂಕು
ಹೆಚ್. ಬಸವಾಪುರ ಗ್ರಾಮದ ವಾಸಿ
ದಿ|| ಎಂ. ಸಿದ್ದಪ್ಪನವರ ಪುತ್ರ
**ಶ್ರೀ ಎಂ.ಎಸ್. ಚಂದ್ರಶೇಖರ್**
ಗ್ರಾಮ ಪಂಚಾಯ್ತಿ ಸದಸ್ಯರು, ಇವರು ದಿನಾಂಕ : 10.02.2023ರ ಶುಕ್ರವಾರ ಬೆಳಿಗ್ಗೆ 10.15ಕ್ಕೆ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರರು, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 11.02.2023ರ ಶನಿವಾರ ಮಧ್ಯಾಹ್ನ 2.00ಕ್ಕೆ ಹೆಚ್. ಬಸವಾಪುರ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :
**ಪತ್ನಿ : ಶ್ರೀಮತಿ ವಸಂತಮ್ಮ ಹಾಗೂ ಮಕ್ಕಳು, ಬಂಧುಗಳು,**
**ಗ್ರಾಮಸ್ಥರು ಹಾಗೂ ಮುತ್ತುಗದೂರು ವಂಶಸ್ಥರು**
**ಫೋ. : 98803 06006, 85535 55976**

## ಕುರ್ಕಿ ರವೀಂದ್ರಕುಮಾರ್ ನಿಧನ



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ವಾಸಿ ಕೋಟೆ ಬಾಗಿಲು ದಿ. ಬಸವಲಿಂಗಪ್ಪ ಇವರ ಪುತ್ರ ರವೀಂದ್ರಕುಮಾರ್ ಕೆ.ಬಿ (55) ಅವರು ದಿನಾಂಕ 10.02.2023ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.02.2023ರ ಶನಿವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

## ಶ್ರೀಮತಿ ಶೋಭಾರಾಣಿ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ 2ನೇ ಮೇನ್ 8ನೇ ಕ್ರಾಸ್ ವಾಸಿ ಶ್ರೀಮತಿ ಸೌಭಾಗ್ಯಮ್ಮ ದಿ.ಕಡತಿ ಗುರುಪಾದಪ್ಪನವರ ಪುತ್ರಿ ಶ್ರೀಮತಿ ಶೋಭಾರಾಣಿ (65) ಅವರು ದಿನಾಂಕ 10.02.2023ರ ಶುಕ್ರವಾರ ಸಂಜೆ 6.30ಕ್ಕೆ ನಿಧನರಾದರು. ತಾಯಿ, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.02.2023ರ ಶನಿವಾರ ಮಧ್ಯಾಹ್ನ 12ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.



# ಹೊಲಕ್ಕೆ 'ಊಟ' ಹಾಕದ ಮಾನವನ 'ಮೂರ್ಖತನ'

## ಸಹಜ ಕೃಷಿ ಪದ್ಧತಿಯಿಂದ ಫಲವತ್ತಾದ ಹೊಲ, ಹೆಚ್ಚು ಲಾಭ : ಸುಭಾಷ್ ಶರ್ಮ

ದಾವಣಗೆರೆ, ಫೆ. 10 - ಹೊಲಕ್ಕೆ 'ಊಟ' ಹಾಕದೆ ದುಡಿಸಿಕೊಳ್ಳುತ್ತಾ ಹೋದರೆ, ಅದು ಹೆಚ್ಚು ಕಾಲ ಉಳಿಯವುದೇ? ಕೃಷಿಯ ಬೆಳವಣಿಗೆಗೆ ನೆರವಾಗುವ 'ಮಿತ್ರ'ರನ್ನು ಕೊಂದು ಹಾಕಿದರೆ ಫಲ ಸಿಗುವುದೇ? ಪ್ರಕೃತಿಯೇ ಮನುಷ್ಯನ 'ಮೂರ್ಖ'ತನದ ವಿರುದ್ಧ ತಿರುಗಿ ಬಿದ್ದರೆ ಉಳಿಯಲು ಸಾಧ್ಯವಾಗುವುದೇ?

ಈ ಪ್ರಶ್ನೆಗಳನ್ನು ಮುಂದಿಟ್ಟಿರುವುದು ಮಹಾರಾಷ್ಟ್ರದ ಯಾವತ್ಮಲ್‌ನ ಸಹಜ ಕೃಷಿ ಪದ್ಧತಿಯ ತಜ್ಞ ಸುಭಾಷ್ ಶರ್ಮ.

ಪ್ರಕೃತಿಗೆ ವಿರುದ್ಧವಾದ ಕೃಷಿ ಪದ್ಧತಿಗೆ ಯಾವತ್ಮಲ್ ಪ್ರದೇಶ ಹೆಸರು ಮಾಡಿದೆ. ಹಸಿರು ಕ್ರಾಂತಿಯ ಕೃಷಿ ಪದ್ಧತಿಗಳಿಂದ ಇಲ್ಲಿನ ರೈತರು ಸಾಲದ ಸುಳಿಗೆ ಸಿಲುಕಿದ್ದರು. ಆತ್ಮಹತ್ಯೆಯ ಪ್ರಮಾಣವೂ ಹೆಚ್ಚಾಗಿತ್ತು. ಇಷ್ಟು ಸಾಲದು ಎಂಬಂತೆ ಒಂದೆರಡು ವರ್ಷಗಳ ಹಿಂದೆ ಕೀಟನಾಶಕ ಸಿಂಪಡಣೆಯಲ್ಲಿ ತೊಡಗಿದ ರೈತರು ಸಾವನ್ನಪ್ಪಿದ್ದ ಹತ್ತಾರು ಘಟನೆಗಳು ನಡೆದಿದ್ದವು.

ಈ ಎಲ್ಲ ಸಂಕಷ್ಟಗಳ ನಡುವೆ, ಕೃಷಿಯಲ್ಲೂ ಕಸುವಿದೆ ಎಂಬುದನ್ನು ತೋರಿಸಿಕೊಟ್ಟಿದ್ದು ಸುಭಾಷ್ ಶರ್ಮ. ತಮ್ಮ 16 ಎಕರೆ ಹೊಲದಲ್ಲಿ ಸಹಜ ಕೃಷಿಯಿಂದ ಉತ್ತಮ ಲಾಭ ಪಡೆದಿದ್ದಷ್ಟೇ ಅಲ್ಲದೇ, ಕೂಲಿ ಕಾರ್ಮಿಕರ ಹಿತದ ಬಗ್ಗೆಯೂ ಗಮನ ಹರಿಸಿ ಶರ್ಮ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದರು. ಸಕಾಳ್ ಮಾಧ್ಯಮ ಸಮೂಹದ ಅಗ್ರೋವನ್ ಮಹಾರಾಷ್ಟ್ರ ಸ್ಮಾರ್ಟ್ ಶೆಟ್ಕಾರಿ ಪುರಸ್ಕಾರ್ ಸೇರಿದಂತೆ ಹಲವು ಗೌರವಗಳನ್ನು ಪಡೆದಿದ್ದಾರೆ.

ಶರ್ಮ ಅವರು ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗೆ ಆಯೋಜಿಸಲಾಗಿದ್ದ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮಾತನಾಡುತ್ತಾ, ಸಹಜ ಕೃಷಿ ಕುರಿತ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಹೊಲಕ್ಕೆ ಪಶುಗಳು ಬೇಕೇ ಬೇಕು. ಪಶುಗಳ ಸೆಗಣಿ ಹಾಗೂ ಜೈವಿಕ ತ್ಯಾಜ್ಯಗಳೇ ಹೊಲಕ್ಕೆ ಊಟವಿದ್ದಂತೆ. ಮಾಂಸಾಹಾರಿ ಕೀಟಗಳಿಂದ ಹೊಲಕ್ಕೆ ರಕ್ಷಣೆ ಸಿಗುತ್ತದೆ. ಕೀಟನಾಶಕ ಸಿಂಪಡಣೆ ಎಂದರೆ, ಈ ರೈತ ಮಿತ್ರ ಕೀಟಗಳನ್ನು ಕೊಲ್ಲುವುದು. ಹೊಲಕ್ಕೆ ವಿಷಕಾರಿ ರಾಸಾಯನಿಕಗಳನ್ನು ಸುರಿಯುವುದು ಎಂದರೆ ಮನುಷ್ಯನ ಮೂರ್ಖತನ. ಈ ಮೂರ್ಖತನ ತೋರಿದರೆ ಪ್ರಕೃತಿ ಮುನಿಯುತ್ತದೆ ಎಂದು ಶರ್ಮ ವಿವರಿಸಿದರು.

1994ರವರೆಗೂ ರಾಸಾಯನಿಕ ಕೃಷಿಯಲ್ಲೇ ತೊಡಗಿದ್ದೆ. ಆದರೆ, ಇದರ ದುಷ್ಪರಿಣಾಮ ನೋಡಿ, ಸಹಜ ಕೃಷಿ ಪದ್ಧತಿಗೆ ಮುಂದಾದೆ. ಅಲ್ಲಿಂದ ನನ್ನ ಹೊಲವೇ ವಿಶ್ವವಿದ್ಯಾಲಯವಾಯಿತು. ಅಲ್ಲಿನ ಮಣ್ಣು, ನೀರು, ಗಾಳಿ, ಪಶು - ಪಕ್ಷಿಗಳೇ ಶಿಕ್ಷಕರಾದರು ಎಂದರು.

ಕಳೆದ 28 ವರ್ಷಗಳಲ್ಲಿ ಸಹಜ ಕೃಷಿಯಲ್ಲಿ ಯಶಸ್ಸು ಕಂಡಿದ್ದೇನೆ. ಅಷ್ಟೇ ಅಲ್ಲದೇ, ಕೇವಲ ಒಂದು ಎಕರೆಯಿಂದ ಹಿಡಿದು 66 ಎಕರೆಯವರೆಗಿನ ಜಮೀನುಗಳಲ್ಲಿ ಸಹಜ ಕೃಷಿ ಮಾಡುವ ಹಲವಾರು ಮಾದರಿಗಳನ್ನು ರೂಪಿಸಿದ್ದೇನೆ. ನಾಲ್ಕು ಲಕ್ಷದಷ್ಟು ಜನರು ನನ್ನ ಕೃಷಿ ಪದ್ಧತಿಯನ್ನು ಅಧ್ಯಯನ ಮಾಡಿದ್ದಾರೆ. ಸಾವಿರಾರು ಜನರು ಅಳವಡಿಸಿಕೊಂಡಿದ್ದಾರೆ ಎಂದವರು ಹೇಳಿದರು.

ಸೂರ್ಯನಿಂದ ಬರುವ ಬೆಳಕು, ಮಣ್ಣು, ಗಾಳಿ, ನೀರು, ಬೀಜ, ಪಶು - ಪಕ್ಷಿಗಳು, ಜೀವ - ಜಂತು - ಜೀವಾಣುಗಳೆಲ್ಲವೂ ಕೃಷಿಗೆ ಪೂರಕವಾಗಬಲ್ಲವು. ರಾಸಾಯನಿಕಗಳನ್ನು ಜಮೀನುಗಳಿಗೆ ಸುರಿಯದೇ, ಪ್ರಕೃತಿಯನ್ನೇ ಸ್ನೇಹಿತನನ್ನಾಗಿ ಮಾಡಿಕೊಂಡು ಉತ್ತಮ ಇಳುವರಿ ಪಡೆಯಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದೇನೆ ಎಂದವರು ತಿಳಿಸಿದರು.

ಸಹಜ ಕೃಷಿಗೆ ಮುಂದಾಗುವವರು ಜಮೀನು ಬೀಳು ಬಿಡಬೇಕಿಲ್ಲ. ಒಂದೇ ವರ್ಷದಲ್ಲಿ ಸಹಜ ಕೃಷಿಯಿಂದ ಲಾಭ ಪಡೆಯಲು ಸಾಧ್ಯ. ಸಹಜ ಕೃಷಿ ಬಗ್ಗೆ ಜನರು ಹೆಚ್ಚು ತಿಳಿದು, ಈ ಪದ್ಧತಿ ಅಳವಡಿಸಿಕೊಂಡಷ್ಟೂ ಲಾಭದತ್ತ ಹೆಜ್ಜೆ ಹಾಕಲು ಸಾಧ್ಯ ಎಂದು ಶರ್ಮ ಹೇಳಿದರು



### ✦ ಬಹುಪಾಲು ಕೀಟಗಳು ಸಸ್ಯ ರಕ್ಷಕ

ಕೀಟಗಳಲ್ಲಿ ಶೇ.80ರಷ್ಟು ಮಾಂಸಾಹಾರಿ. ಇವುಗಳಿಂದ ಬೆಳೆಗೆ ಹಾನಿಯಿಲ್ಲ, ಬದಲಿಗೆ ಇವು ಸಸ್ಯಗಳನ್ನು ತಿನ್ನುವ ಕೀಟಗಳನ್ನೇ ಭಕ್ಷಿಸುತ್ತವೆ. ಮಾಂಸಾಹಾರಿ ಕೀಟಗಳು ಹೆಚ್ಚಾದಷ್ಟೂ ಕೃಷಿಗೆ ಅನುಕೂಲ. ಆದರೆ, ರಾಸಾಯನಿಕಗಳನ್ನು ಸುರಿಯುವುದರಿಂದ ರೈತರ ಸ್ನೇಹಿ ಮಾಂಸಾಹಾರಿ ಕೀಟಗಳು ನಾಶವಾಗುತ್ತವೆ ಎಂದವರು ಹೇಳುತ್ತಾರೆ.

### ✦ ಮಹಿಳೆಯರಿಗೆ ಹೆಚ್ಚು ಕೂಲಿ

ಸುಭಾಷ್ ಶರ್ಮ ಅವರು ಮಹಿಳೆಯರಿಗೆ ಹೆಚ್ಚು ಕೂಲಿ ಕೊಡುವ ಪದ್ಧತಿ ಅಳವಡಿಸಿಕೊಂಡಿದ್ದಾರೆ. ತಮ್ಮ ಹೊಲದಲ್ಲಿ ಕೆಲಸ ಮಾಡುವ ಮಹಿಳೆಯರು ಬೆಳಿಗ್ಗೆ 4 ಗಂಟೆಯಿಂದಲೇ ಮನೆ ಕೆಲಸಗಳನ್ನು ಮುಗಿಸಿ ನಂತರ ಹೊಲಕ್ಕೆ ಬರುತ್ತಾರೆ. ಪುರುಷರು 6 ಗಂಟೆಯಿಲ್ಲದೇ ಏಳುವುದಿಲ್ಲ. ಅಲ್ಲದೇ, ಹೊಲದಲ್ಲಿ ಮಹಿಳೆಯರಷ್ಟು ಶ್ರದ್ಧೆಯಿಂದ ಪುರುಷರು ಕೆಲಸ ಮಾಡುವುದಿಲ್ಲ. ಹೀಗಾಗಿ ಮಹಿಳೆಯರಿಗೇ ಕೂಲಿ ಹೆಚ್ಚು ಕೊಡುತ್ತೇನೆ ಎಂಬುದು ಅವರ ನಿರ್ಧಾರ.

### ✦ ಎಲ್ಲ ಜೀವ - ಜಂತುಗಳೂ ಭೂಮಿಗೆ ಭೋಜನ

ಕೃಷಿ ಎಂದರೆ ಕೇವಲ ಬೆಳೆ ಬೆಳೆಯುವುದಲ್ಲ. ಬೆಳೆಗೆ ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ಪೋಷಿಸುವುದು. ಪಶು - ಪಕ್ಷಿಗಳು, ಜೀವ - ಜಂತು - ಜೀವಾಣುಗಳು ಕೃಷಿಗೆ ಅಗತ್ಯ. ಪಶುಗಳು ಸೆಗಣಿ - ಹಿಕ್ಕೆಯಿಂದ ಜಮೀನು ಫಲವತ್ತಾಗುತ್ತದೆ. ಪಶುಗಳ ಸತ್ತಾಗ ಅವುಗಳ ದೇಹ ಮಣ್ಣಿನಲ್ಲಿ ಬೆರೆತು ಫಲವತ್ತತೆ ಹೆಚ್ಚಿಸುತ್ತದೆ. ಎಲ್ಲ ರೀತಿಯ ಜೀವ - ಜಂತು - ಜೀವಾಣುಗಳು ಸತ್ತಾಗಲೂ ಮಣ್ಣು ಫಲವತ್ತಾಗುತ್ತದೆ. ಈ ರೀತಿಯ ಫಲವತ್ತತೆಯೇ ಭೂಮಿಗೆ ಭೋಜನ ಇದ್ದಂತೆ. ಇದು ಭೂಮಿಗೆ ಸಿಗದಂತೆ ಮಾಡಿದರೆ ಕೃಷಿ ಉದ್ಧಾರವಾಗದು ಎಂದವರು ತಿಳಿಸಿದರು.

### ✦ ಶ್ರೀಲಂಕಾದ್ದು ಅವಸರದ ಸಾವಯವ ಕೃಷಿ

ಶ್ರೀಲಂಕಾದಲ್ಲಿ 2021ರಲ್ಲಿ ಹಠಾತ್ತನೆ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ನಿಷೇಧಿಸಿ ಸಾವಯವ ಕೃಷಿಗೆ ತೆರಳುವಂತೆ ರೈತರಿಗೆ ತಿಳಿಸಲಾಯಿತು. ಆದರೆ, ಈ ಪ್ರಯೋಗ ಯಶಸ್ವಿಯಾಗದೇ ಆಹಾರ ಬಿಕ್ಕಟ್ಟಿಗೆ ಕಾರಣವಾಯಿತು.

ಶ್ರೀಲಂಕಾದ ವೈಫಲ್ಯಕ್ಕೆ ಸಾವಯವ ಕೃಷಿ ಕಾರಣವಲ್ಲ ಎಂದಿರುವ ಸುಭಾಷ್ ಶರ್ಮ, ಅವಸರದಲ್ಲಿ ಕೃಷಿ ಪದ್ಧತಿ ಬದಲಾವಣೆ ಮಾಡಲಾಯಿತು. ಸಹಜ ಕೃಷಿಗೆ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಇದಕ್ಕಾಗಿ ರೈತರಿಗೆ ತರಬೇತಿ ನೀಡಬೇಕು ಎಂದರು.

# ಮಲೇಬೆನ್ನೂರು : ವಿವಿಧ ಕಾಮಗಾರಿಗಳಿಗೆ ಚಾಲನೆ



ಮಲೇಬೆನ್ನೂರು, ಫೆ.10- ಪಟ್ಟಣದ ಪುರಸಭೆ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ (7, 19, 22, 23ನೇ ವಾರ್ಡ್‌ಗಳಲ್ಲಿ) ನಗರೋತ್ಥಾನ ಹಂತ -4ರ ಅಡಿಯಲ್ಲಿ ಸಿಸಿ ರಸ್ತೆ ಮತ್ತು ಸಿಸಿ ಚರಂಡಿಗಳ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಎಸ್.ರಾಮಪ್ಪ ಅವರು ಬುಧವಾರ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಪುರಸಭೆ ಸದಸ್ಯರಾದ ಶ್ರೀಮತಿ ವಿಜಯಲಕ್ಷ್ಮಿ, ದಾದಾಪೀರ್, ಷಾ ಅಬ್ರಾರ್, ಭೋವಿ ಶಿವು, ಕೆ.ಜಿ.ಲೋಕೇಶ್, ಟಿ. ಹನುಮಂತಪ್ಪ, ಚಮನ್ ಷಾ, ಬಿ. ಸುರೇಶ್, ಭೋವಿಕುಮಾರ್, ಪೂಜಾರ್ ದೇವರಾಜ್, ಡಿ.ಕೆ.ಸಿದ್ದನಗೌಡ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್, ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ಇಂಜಿನಿಯರ್ ಹಾಲೇಶಪ್ಪ ಹಾಗೂ ಮತ್ತಿತರರು ಈ ವೇಳೆ ಹಾಜರಿದ್ದರು.

# ಹರಪನಹಳ್ಳಿ, ಹರಿಹರ, ಹೊನ್ನಾಳಿಯಿಂದ ಶಿವಮೊಗ್ಗ ಪ್ರಯಾಣ ದುಸ್ತರ

ದಾವಣಗೆರೆ, ಫೆ.10– ರಾಜ್ಯ ಸರ್ಕಾರ ತಮ್ಮ ರಾಷ್ಟ್ರೀಯ ನಾಯಕರು ಬೆಂಗಳೂರಿಗೆ ಬಂದಾಗ ರಸ್ತೆಯ ಅಭಿವೃದ್ಧಿಗೆಂದು ಸಾವಿರಾರು ಕೋಟಿ ರೂ.ಗಳನ್ನು ದುಂದು ವೆಚ್ಚ ಮಾಡುತ್ತಿದ್ದು, ಇಂತಹ ಸರ್ಕಾರಕ್ಕೆ ಪ್ರತಿದಿನ ಸಾವಿರಾರು ವಾಹನಗಳು ಓಡಾಡುವ ಹರಪನಹಳ್ಳಿಯಿಂದ ಶಿವಮೊಗ್ಗ ರಾಜ್ಯ ಹೆದ್ದಾರಿ ರಸ್ತೆ ಕಣ್ಣಿಗೆ ಕಾಣದಿರುವುದು ಮಾತ್ರ ಸರ್ಕಾರದ ಕುರುಡುತನಕ್ಕೆ ಸಾಕ್ಷಿಯಾಗಿದೆ ಎಂದು ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಕೆ.ಎಲ್.ಹರೀಶ್ ಬಸಾಪುರ ಬೇಸರ ವ್ಯಕ್ತಪಡಿಸಿದ್ದಾರೆ.

ಗುಲ್ಬರ್ಗದಿಂದ, ಮಂಗಳೂರು, ಉಡುಪಿ, ಧರ್ಮಸ್ಥಳಕ್ಕೆ ಮತ್ತು ಬೆಂಗಳೂರಿನಿಂದ ಹಾಗೂ ಬೆಳಗಾಂ ಮತ್ತು ಹುಬ್ಬಳ್ಳಿ ಕಡೆಯಿಂದ ಶಿವಮೊಗ್ಗಕ್ಕೆ ಪ್ರತಿದಿನ ಸಾವಿರಾರು ಸರ್ಕಾರಿ ಸಾರಿಗೆ ವಾಹನಗಳು ಹಾಗೂ ಲೆಕ್ಕವಿಲ್ಲದಷ್ಟು ಕಾರ್ ಬೈಕ್ ಗಳು ಓಡಾಡುತ್ತಿದ್ದು, ಇಂತಹ ರಸ್ತೆ ದಾವಣಗೆರೆ ನಗರದ ಒಳಗಿರುವ ಪಿ.ಬಿ. ರಸ್ತೆಯ ಅರ್ಧದಷ್ಟು ಕಿರಿದಾಗಿರುವುದು ಮಾತ್ರ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದೆ.

ಪ್ರತಿ ಬಾರಿ ಅಪಘಾತ ನಡೆದು ಸಾವು ನೋವು ಅನುಭವಿಸಿದಾಗ, ಸ್ಥಳಕ್ಕೆ ಬರುವ ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಶೀಘ್ರವೇ ರಸ್ತೆಯಾಗಲೀಕರಣ ಮಾಡುವ ಭರವಸೆ ನೀಡುತ್ತಾರೆ ವಿನಃ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ.

ಸಾವಿರಾರು ವಾಹನಗಳು ಓಡಾಡುವ ಈ ರಸ್ತೆ ಎಷ್ಟು ಕಿರಿದಾಗಿದೆ ಎಂದರೆ, ಎದುರಿಗೆ ಒಂದು ವಾಹನ ಬಂದರೆ ಇನ್ನೊಬ್ಬರು ತಮ್ಮ ವಾಹನವನ್ನು ರಸ್ತೆಯಿಂದ ಕೆಳಗಿಳಿಸ ಬೇಕು. ಅಂತಹ ಪರಿಸ್ಥಿತಿಯಲ್ಲಿ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದುಕೊಂಡು ತಮ್ಮ ವಾಹನ ಚಲಾಯಿಸುತ್ತಾರೆ, ಇನ್ನು ರಾತ್ರಿ ಪ್ರಯಾಣ ವಂತು ಯಮಧರ್ಮರಾಯನ ಜೊತೆ 'ಜೂಟ್ ಆಟ' ಆಡಿದಂತೆ ಎಂದು ಹರೀಶ್ ಅಕ್ರೋಶ ವ್ಯಕ್ತಪಡಿಸಿದ್ದಾರೆ.

# ಹೆಚ್ಚುವರಿ ಇಂಜಿನ್ ಇಲ್ಲದೇ ಪಶ್ಚಿಮ ಘಟ್ಟ ಏರಿದ ವಂದೇ ಭಾರತ್ ರೈಲು

ಮುಂಬೈ, ಫೆ. 10 – ವಂದೇ ಭಾರತ್ ರೈಲುಗಳು ಮುಂಬೈ ಬಳಿಯ ಪಶ್ಚಿಮ ಘಟ್ಟಗಳ ಕಡಿದಾದ ಬೆಟ್ಟಗಳನ್ನು ಹೆಚ್ಚುವರಿ ಇಂಜಿನ್ ಇಲ್ಲದೇ ಏರಿವೆ. ಭಾರತೀಯ ರೈಲ್ವೆ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರೈಲೊಂದು ಈ ಸಾಧನೆ ಮಾಡಿವೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರದಂದು ಸಾಯಿನಗರ ಶಿರಡಿ ಹಾಗೂ ಸೊಲ್ಲಾಪುರ ರೈಲುಗಳಿಗೆ ಚಾಲನೆ ನೀಡಿದರು. ಇವುಗಳು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್ಸ್ ಮೂಲಕ ಹೊರಟಿದ್ದವು. ಇವು ಯಶಸ್ವಿಯಾಗಿ ಥಾಲ್ ಘಾಟ್ ಹಾಗೂ ಭೋರ್ ಘಾಟ್‌ಗಳನ್ನು ಹೆಚ್ಚುವರಿ ಇಂಜಿನ್ ಇಲ್ಲದೇ ದಾಟಿವೆ.

ಈ ಎರಡೂ ಘಾಟ್‌ಗಳು ಕಡಿದಾಗಿವೆ. ಪ್ರತಿ 37 ಮೀಟರ್ ದೂರ ಸಾಗುವಷ್ಟರಲ್ಲಿ ಒಂದು ಮೀಟರ್ ಎತ್ತರ ಏರುತ್ತವೆ. ಇದು ದೇಶದ ಅತ್ಯಂತ ಕಠಿಣ ಮಾರ್ಗಗಳಲ್ಲಿ ಒಂದಾಗಿದೆ.



ಈ ರೈಲುಗಳಲ್ಲಿ ಏನಾದರೂ ಸಮಸ್ಯೆಯಾದಲ್ಲಿ ಉರುಳುವುದನ್ನು ತಪ್ಪಿಸಲು ಪಾರ್ಕಿಂಗ್ ಬ್ರೇಕ್‌ಗಳನ್ನು ಅಳವಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶನಿವಾರದಿಂದ ಈ ರೈಲುಗಳ ವಾಣಿಜ್ಯ ಪ್ರಯಾಣ ಆರಂಭವಾಗಲಿದೆ.

# ರಾಷ್ಟ್ರಮಟ್ಟಕ್ಕೆ ರಾಷ್ಟ್ರೋತ್ಥಾನ ಶಾಲೆ





ದಾವಣಗೆರೆ,ಫೆ.10- ಗುಲ್ಬರ್ಗಾದಲ್ಲಿ ಈಚೆಗೆ ಆಯೋಜಿಸಲಾಗಿದ್ದ 30ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಕಾಂಗ್ರೆಸ್ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳಾದ ಅನಘ ಟಿ.ಆರ್ ಹಾಗೂ ಪ್ರಸಾದ್ ಆರ್. ಪೂಜಾರ್ ಅವರು 'ಒಣ ಭೂಮಿ ಪರಿಸರದಲ್ಲಿ ಗೆದ್ದಲುಗಳ ಪಾತ್ರ' ಎಂಬ ವಿಷಯವನ್ನು ಮಂಡಿಸುವುದರ ಮೂಲಕ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಜನವರಿ 27 ರಿಂದ 31ರವರೆಗೆ ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಕಾರ್ಯಾಗಾರಕ್ಕೆ ಆಯ್ಕೆಯಾಗಿರುವ ಶಾಲಾ ವಿದ್ಯಾರ್ಥಿಗಳನ್ನು ಮತ್ತು ಮಾರ್ಗದರ್ಶನ ನೀಡಿದ ಶಿಕ್ಷಕಿಯರಾದ ಶ್ರೀಮತಿ ಪ್ರೇಮಾ ಸಿ.ಎಂ, ಕು.ವಿದ್ಯಾ ಹೆಚ್. ಬಿ. ಇವರನ್ನು ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

ಪರಿಸರ ಸ್ನೇಹಿ ಗೆದ್ದಲುಗಳ ಬಗ್ಗೆ ತಿಳಿಯಲು ಟಿಕೆವಿಕೆಯ ಹಿರಿಯ ವಿಜ್ಞಾನಿ ಡಾ. ಟಿ.ಜಿ. ಅವಿನಾಶ್, ಯೋಜನೆ ಮತ್ತು ಅದರ ಅನುಷ್ಠಾನದ ಬಗ್ಗೆ ಮಾರ್ಗದರ್ಶನ ಪಡೆಯಲು ಟಿಕೆವಿಕೆ ಮುಖ್ಯಸ್ಥ ಡಾ. ಟಿ. ಎನ್. ದೇವರಾಜ್ ಅವರನ್ನು ಶಾಲೆಯ ವಿದ್ಯಾರ್ಥಿಗಳು ಸಂಪರ್ಕಿಸಿ ಹೆಚ್ಚಿನ ವಿಷಯ ಕಲೆ ಹಾಕಿದ್ದರು.

# ಭದ್ರಾ ಮೇಲ್ದಂಡೆ : ಸಿಎಂ ಹೇಳಿಕೆ ರಾಜಕೀಯ ಪ್ರೇರಿತ



ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ, ಮಾಜಿ ಸಂಸದ ಕೋದಂಡರಾಮಯ್ಯ

ಚಿತ್ರದುರ್ಗ, ಫೆ.10- ಕಳೆದ 1960ರ ದಶಕದಿಂದಲೂ ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾಂಗ್ರೆಸ್ ನಿರ್ಲಕ್ಷಿಸಿದೆ ಎಂಬ ಸಿಎಂ ಬಸವರಾಜ ಬೊಮ್ಮಾಯಿ ಹೇಳಿಕೆ ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷರೂ ಆದ ಮಾಜಿ ಸಂಸದ ಪಿ. ಕೋದಂಡರಾಮಯ್ಯ ಹೇಳಿದ್ದಾರೆ.

ಈ ಸಂಬಂಧ ಶುಕ್ರವಾರ ಹೇಳಿಕೆ ನೀಡಿರುವ ಅವರು, ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ 5300 ಕೋಟಿ ರೂ. ಮೀಸಲಿಟ್ಟಿರುವುದು ಸ್ವಾಗತಾರ್ಹ. ಅದನ್ನು ಪಕ್ಷಾತೀತವಾಗಿ ಎಲ್ಲರೂ ಸ್ವಾಗತಿಸಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜಕೀಯ ಲಾಭಕ್ಕಾಗಿ ಮುಖ್ಯಮಂತ್ರಿ ಇಳಿಯಬಾರದಿತ್ತು ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಯೋಜನೆ ಜಾರಿಗೆ ಚಿತ್ರದುರ್ಗ ಜಿಲ್ಲೆಯ ಜನರು, ಸಂಘ-ಸಂಸ್ಥೆಗಳು, ಜಿಲ್ಲಾ ನೀರಾವರಿ ಹೋರಾಟ ಸಮಿತಿ ನೇತೃತ್ವದಲ್ಲಿ ದಶಕಗಳ ಕಾಲ ನಡೆಸಿದ ಚಳವಳಿಯೇ ಮುಖ್ಯ ಕಾರಣ ಎಂಬುದನ್ನು ಮುಖ್ಯಮಂತ್ರಿಗಳು ಮರೆಯಬಾರದಿತ್ತು.

ಎಸ್. ನಿಜಲಿಂಗಪ್ಪ ಅವರು 60ರ ದಶಕದಲ್ಲಿ ಎರಡು ಬಾರಿ ಸಿಎಂ ಆಗಿದ್ದರೂ ಯೋಜನೆ ಜಾರಿಗೆ ಯಾಕೆ ಮುಂದಾಗಲಿಲ್ಲ ಎಂಬ ಅಭಿಪ್ರಾಯ ಜನರ ಮನದಲ್ಲಿ ಈಗಲೂ ಇದೆ. ಅದನ್ನು ತಾವು ನೇರವಾಗಿ ಪ್ರಸ್ತಾಪ ಮಾಡಬಹುದಿತ್ತು. ಆದರೆ, ರಾಜಕೀಯ ಕಾರಣಕ್ಕಾಗಿ ಪಕ್ಷವೊಂದರ ವಿರುದ್ಧ ಟೀಕೆಗೆ ಮುಂದಾಗಿರುವುದು ಸರಿಯಲ್ಲ.

ಲೋಕಸಭೆಯಲ್ಲಿ ಈ ಎರಡೂ ಯೋಜನೆಗಳ ಕುರಿತು ಪ್ರಥಮ ಬಾರಿಗೆ ಧ್ವನಿಯೆತ್ತಿ ಸರ್ಕಾರದ ಗಮನ ಸೆಳೆದಿದ್ದೆ, ದುರಾದೃಷ್ಟವಶಾತ್ ಲೋಕಸಭೆ ವಿಸರ್ಜನೆಗೊಂಡ ಪರಿಣಾಮ ಜನಪ್ರತಿನಿಧಿಯಾಗಿ ಲೋಕಸಭೆಯಲ್ಲಿ ಹೋರಾಟ ನಡೆಸುವ ಅವಕಾಶ ನನ್ನ ಕೈತಪ್ಪಿತು. ಜನರಿಗೆ ಕೊಟ್ಟ ಭರವಸೆ ಈಡೇರಿಸಲು ಅನಿವಾರ್ಯವಾಗಿ ಜನ ಹೋರಾಟಕ್ಕೆ ಧುಮುಕುವ ಸಂದರ್ಭ ಸೃಷ್ಟಿ ಆಯ್ತು.

ಅದರ ಪರಿಣಾಮ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷನಾಗಿ ಬೀದಿಯಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ನಿರಂತರ ಹೋರಾಟ ನಡೆಸಿದ್ದೇನೆ. ಇದಕ್ಕೆ ಜಿಲ್ಲೆಯ ಜನ, ಸಂಘ-ಸಂಸ್ಥೆಗಳ ಮುಖಂಡರು, ಪತ್ರಕರ್ತರು, ಮಠಾಧೀಶರು ಮುಂಚೂಣಿಯಲ್ಲಿ ನಿಂತು ಬೆಂಬಲಿಸಿದ್ದಾರೆ. ಈ ಎಲ್ಲದರ ಫಲ ಯೋಜನೆ ಜಾರಿ ಆಗಿದೆ ಎಂಬುದಷ್ಟೇ ಕಟು ಸತ್ಯ.

ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ನೀರಾವರಿ ಸಚಿವರಾಗಿದ್ದ ಎಚ್.ಕೆ.ಪಾಟೀಲ ಅವರೊಂದಿಗೆ ವಿಧಾನಸಭೆಯಲ್ಲಿ ಸಮಿತಿಯು ಹಲವು ಸಭೆ ನಡೆಸಿ ಯೋಜನೆ ಜಾರಿಗೆ ಒತ್ತಾಯಿಸಿತ್ತು. ಮುಖ್ಯವಾಗಿ ಹೋರಾಟ ಸಮಿತಿ ಅಧ್ಯಕ್ಷನಾಗಿ ಅಧ್ಯಯನ ನಡೆಸಿ ನೀರಿನ ಲಭ್ಯತೆ ಕುರಿತು ಎಚ್.ಕೆ.ಪಾಟೀಲ್ ಅವರಿಗೆ ಖಚಿತ ಮಾಹಿತಿ ನೀಡಿದ್ದರ ಪರಿಣಾಮ 2003 ಸೆಪ್ಟೆಂಬರ್ ತಿಂಗಳಲ್ಲಿ ಭದ್ರಾ ಯೋಜನೆ ಜಾರಿಗೆ ಸರ್ಕಾರ ಘೋಷಣೆ ಮಾಡಿತು.

ಬಳಿಕ, ಧರ್ಮಸಿಂಗ್ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಸಿದ್ದರಾಮಯ್ಯ ಹಾಗೂ ಈಗಿನ ಮುಖ್ಯಮಂತ್ರಿಗಳಾದ ಬೊಮ್ಮಾಯಿ ಕೂಡ ಯೋಜನೆ ಜಾರಿಗೆ ವಿವಿಧ ಹಂತಗಳಲ್ಲಿ ಸಹಕರಿಸಿದ್ದಾರೆ. ಎಲ್ಲಾ ಪಕ್ಷಗಳು ಯೋಜನೆ ಜಾರಿಗೆ ತಮ್ಮ ತಮ್ಮ ಕಾಲಘಟ್ಟದಲ್ಲಿ ನೀಡಿದ ಕೊಡುಗೆಯನ್ನು ಮರೆಮಾಚುವುದು ಮುಖ್ಯಮಂತ್ರಿ ಹುದ್ದೆಗೆ ಗೌರವ ತರುವುದಿಲ್ಲ. ಜೊತೆಗೆ ಅನಗತ್ಯ ವಿವಾದಕ್ಕೆ ಎಡೆಮಾಡಿಕೊಡುವ ಜೊತೆಗೆ ಜನರ ಹೋರಾಟಕ್ಕೆ ಅಪಮಾನ ಮಾಡಿದಂತೆ ಆಗುತ್ತದೆ ಎಂಬುದನ್ನು ಮುಖ್ಯಮಂತ್ರಿಗಳು ಅರಿತುಕೊಳ್ಳಬೇಕು ಎಂದು ಹೇಳಿರುವ ಕೋದಂಡರಾಮಯ್ಯ, ಸಾಂವಿಧಾನಿಕ ಸ್ಥಾನದಲ್ಲಿರುವವರು ಚುನಾವಣೆಯ ಹೊಸ್ತಿಲಲ್ಲಿ ರಾಜಕೀಯ ಲಾಭ ಪಡೆಯಲು ಆಧಾರ ರಹಿತ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಬಸವಣ್ಣನವರ ಪುತ್ಥಳಿ ತೆರವಿಗೆ ಕರವೇ ಆಕ್ರೋಶ

ದಾವಣಗೆರೆ, ಫೆ. 10- ಅಭಿವೃದ್ಧಿ ನೆಪದಲ್ಲಿ ಹುಬ್ಬಳ್ಳಿಯಲ್ಲಿ ಮಹಾನಗರ ಪಾಲಿಕೆಯು ವಿಶ್ವಗುರು ಬಸವಣ್ಣನವರ ಪುತ್ಥಳಿ ತೆರವಿಗೆ ಮುಂದಾಗಿರುವುದನ್ನು ಜಿಲ್ಲಾ ಕರ್ನಾಟಕ ರಕ್ಷಣಾ ವೇದಿಕೆ ಖಂಡಿಸಿದೆ.

ಯಾವುದೇ ದಾರ್ಶನಿಕರ ಹೆಸರುಗಳನ್ನು ಪ್ರಮುಖ ವೃತ್ತ, ರಸ್ತೆಗಳಿಗೆ ಇಡುವುದು ಮುಂದಿನ ಯುವ ಪೀಳಿಗೆಗೆ ದಾರ್ಶನಿಕರ ಪರಿಚಯ, ಸಾಧನೆ ಬಗ್ಗೆ ತಿಳಿದುಕೊಳ್ಳಲೆಂದು. ಮಹಾನಗರ ಪಾಲಿಕೆಯವರು ಸಭೆ ಕರೆದು ಈ ಬಗ್ಗೆ ಚರ್ಚಿಸಬೇಕಾಗಿತ್ತು.

ಧಾರವಾಡ ಸಂಸದರ ಮನವೊಲಿಸಿರುವುದನ್ನು ನೋಡಿದರೆ, ಈ ಪುತ್ಥಳಿ ತೆರವುಗೊಳಿಸುವಲ್ಲಿ ಅವರದೂ ಪಾತ್ರ ಇದೆ ಎಂದು ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ. ತಕ್ಷಣ ಸಂಸದರು ತೆರವುಗೊಳಿಸಿರುವ ಪುತ್ಥಳಿಯನ್ನು ಮರು ಪ್ರತಿಷ್ಠಾಪಿಸಬೇಕು ಎಂದು ವೇದಿಕೆ ಅಧ್ಯಕ್ಷ ರಾಮೇಗೌಡ ಒತ್ತಾಯಿಸಿದ್ದಾರೆ.

# ತೆಂಗಿನ ಉಪ ಉತ್ಪನ್ನಗಳಿಂದ ರೈತರಿಗೆ ಹೆಚ್ಚು ಲಾಭ

## ಆಲೂರು ಗ್ರಾಮ ರೈತ ತರಬೇತಿ ಕಾರ್ಯಕ್ರಮದಲ್ಲಿ ಬೇಸಾಯ ತಜ್ಞ ಮಲ್ಲಿಕಾರ್ಜುನ್




ದಾವಣಗೆರೆ, ಫೆ.10- ಸಂಪನ್ಮೂಲ ಸಂಸ್ಥೆಯಾದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಮತ್ತು ಹಿರೇಕೋಗಲೂರು ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ವತಿಯಿಂದ ಚನ್ನಗಿರಿ ತಾಲ್ಲೂಕು ಆಲೂರು ಗ್ರಾಮದಲ್ಲಿ ಪ್ರಧಾನ ರೈತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಅಮೃತ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಶಿವಕುಮಾರ ಹಾಗೂ ನಿರ್ದೇಶಕರುಗಳು ತರಬೇತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು.

ಬೇಸಾಯ ತಜ್ಞ ಬಿ. ಓ. ಮಲ್ಲಿಕಾರ್ಜುನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕಂಪನಿ ಸ್ಥಾಪನೆಯಾಗಿ ಒಂದು ವರ್ಷ ಕಳೆದಿದ್ದು ನಾವು ಮುಂಬರುವ ದಿನಗಳಲ್ಲಿ ತೆಂಗಿನ ಉಪ ಉತ್ಪನ್ನಗಳನ್ನು ಮಾಡಿ ಮಾರಾಟ ಮಾಡಿದರೆ ಮಾತ್ರ ಕಂಪನಿ ಹೆಚ್ಚು ಲಾಭ ಗಳಿಸುತ್ತದೆ ಮತ್ತು ರೈತರಿಗೆ ಅನುಕೂಲವಾಗುತ್ತದೆ ಎಂದರು.

ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ ಮಾತನಾಡುತ್ತಾ, ಅಡಿಕೆ ಬೆಳೆಯ ವಿಸ್ತರಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ರೈತರು ಸರಿಯಾದ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳದಿದ್ದರೆ ತೋಟಗಳು ಅನೇಕ ರೋಗಗಳಿಗೆ ತುತ್ತಾಗಿ ಇಳುವರಿ ಕುಂಠಿತವಾಗುತ್ತದೆ ಎಂದು ತಿಳಿಸಿದರು.

ರೈತರಿಗೆ ಸಮಗ್ರ ನೀರು ನಿರ್ವಹಣೆ, ಕೀಟ ಮತ್ತು ಪೋಷಕಾಂಶಗಳ ನಿರ್ವಹಣೆ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿದರು. ರೈತರ ಅನೇಕ ಪ್ರಶ್ನೆಗಳಿಗೆ ವಿಜ್ಞಾನಿಗಳು ತಾಳ್ಮೆಯಿಂದ ಉತ್ತರ ನೀಡಿದರು.

ಎನ್.ಆರ್.ಆಕಾಶ್ ಕಾರ್ಯಕ್ರಮ ನಿರೂಪಿಸಿದರು, ಶಶಿಕಲಾ ಸ್ವಾಗತಿಸಿದರು. ಕಂಪನಿಯ ಸಿಇಓ ವಿನಯ್ ಕುಮಾರ್, ಉಪಾಧ್ಯಕ್ಷ ಜಗದೀಶ್, ನಿರ್ದೇಶಕರಾದ ಚಂದ್ರಪ್ಪ, ಮಲ್ಲಿಕಾರ್ಜುನ್, ಭರತ್ ರಾಜ್, ಗಣೇಶಪ್ಪ, ಯಶೋಧಮ್ಮ, ಶಶಿಕಲಾ, ತಿಪ್ಪೇಸ್ವಾಮಿ ಹಾಗೂ ಅಕ್ಕಪಕ್ಕದ ಗ್ರಾಮದ ಪ್ರಗತಿಪರ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರೈತರ ಬಂಡವಾಳ, ಆದಾಯದ ಕೃಷಿ ಅಧ್ಯಯನದಲ್ಲಿ ಸರ್ಕಾರಗಳು ಸಂಪೂರ್ಣ ವಿಫಲ

## ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ರೈತ ಗೋಷ್ಠಿಯಲ್ಲಿ ರೈತ ಮುಖಂಡ ವೀರಸಂಗಯ್ಯ ಬೇಸರ

ಹರಿಹರ, ಫೆ.10- ರಾಜ್ಯದಲ್ಲಿ ರೈತರ ಬಂಡವಾಳ ಮತ್ತು ಆದಾಯದ ಬಗ್ಗೆ ತಿಳಿಯುವಂತಹ ಕೃಷಿ ಅಧ್ಯಯನ ನಡೆಸುವಲ್ಲಿ ನಮ್ಮ ದೇಶದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ ಬೇಸರ ವ್ಯಕ್ತಪಡಿಸಿದರು.

ಅವರು, ಗುರುವಾರ ಹರಿಹರ ತಾಲ್ಲೂಕು ರಾಜನಹಳ್ಳಿಯ್ಲಲಿನ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ರೈತ ಗೋಷ್ಠಿಯಲ್ಲಿ ಪ್ರಸ್ತುತ ಕೃಷಿ ಬಿಕ್ಕಟ್ಟು ಮತ್ತು ಪರಿಹಾರಗಳ ಕುರಿತು ಉಪನ್ಯಾಸ ನೀಡಿದರು.

ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಸೇರಿದಂತೆ 46 ಕೃಷಿಗೆ ಸಂಬಂಧಿಸಿದ ವಿಶ್ವವಿದ್ಯಾಲಯಗಳಿದ್ದು, ಇವುಗಳು ಕೇವಲ ಕೃಷಿ ತಳಿಗಳನ್ನು ಅಷ್ಟೇ ಕಂಡು ಹಿಡಿದವೇ ವಿನಃ ಭತ್ತ, ಶೇಂಗಾ ಸೇರಿದಂತೆ ಬೆಳೆಗಳಿಗೆ ಖರ್ಚು ಎಷ್ಟು ? ರೈತರು ಎಷ್ಟು ಬಂಡವಾಳ ಹೂಡುತ್ತಾರೆ ? ಎಂಬ ಲೆಕ್ಕಾಚಾರವನ್ನು ಇವತ್ತಿಗೂ ರಾಜ್ಯದ ವಿವಿಗಳಷ್ಟೇ ಅಲ್ಲದೇ ಭಾರತದಲ್ಲಿರುವಂತ 500ಕ್ಕೂ ಹೆಚ್ಚು ಕೃಷಿಗೆ ಸಂಬಂಧಿಸಿದ ವಿವಿಗಳ ಪ್ರೊಫೆಸರ್‌ಗಳಾಗಲೀ, ಅರ್ಥಶಾಸ್ತ್ರಜ್ಞರು ಅಧ್ಯಯನ ನಡೆಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಎಂ.ಎಸ್. ಸ್ವಾಮಿನಾಥನ್ ಆಯೋಗವು ಭಾರತ ದೇಶದ ಉದ್ದಗಲಕ್ಕೂ ಅಧ್ಯಯನ ನಡೆಸಿ, ಭಾರತದ ರೈತರು ಕೃಷಿಗೆ ಹಾಕಿದ ಬಂಡವಾಳದಲ್ಲಿ ಶೇ.18 ರಿಂದ 23 ರಷ್ಟು ನಷ್ಟದಲ್ಲಿ ವ್ಯಾಪಾರ ಮಾಡುವುದಾಗಿ ವರದಿಯನ್ನು ನೀಡಿತ್ತು. ಇದರ ವರದಿ ಅನುಸಾರ ರೈತರ ಹಿತರಕ್ಷಣೆ, ಕೃಷಿಯ ರಕ್ಷಣೆ ಬಗ್ಗೆ ಸರ್ಕಾರಗಳು ಚಿಂತಿಸಬೇಕು ಎಂದರು.

ರಾಜ್ಯದಲ್ಲಿ ಕೃಷಿ ಭೂಮಿ ಹೊಂದಿದ 87 ಲಕ್ಷ ರೈತ ಕುಟುಂಬ ಇದ್ದು, ಈ ಪೈಕಿ 69 ಲಕ್ಷ ಸಣ್ಣ ಹಿಡುವಳಿದಾರರು, 45 ಲಕ್ಷ ಮಂದಿ ಕೃಷಿ ಪಂಪ್ ಸೆಟ್‌ಗಳ ಅಳವಡಿಸಿಕೊಂಡು ಇವುಗಳ ಮೇಲೆಯೇ ಅವಲಂಬಿತರಾಗಿ 97 ಬೆಳೆಗಳನ್ನು ಬೆಳೆದು ಬದುಕು ಕಂಡುಕೊಳ್ಳುತ್ತಿದ್ದಾರೆ. ಕೃಷಿಯಲ್ಲಿ ಉತ್ಪಾದನೆಯಲ್ಲಿ ಹಿಂದೆ ಬಿದ್ದಿಲ್ಲ. 1977ರಲ್ಲಿ ನಮ್ಮ ದೇಶದಲ್ಲಿ ಎರಡು ಹೊತ್ತು ಊಟ ಸಿಗುತ್ತಿರಲಿಲ್ಲ. ಆಗ ರೈತರು ದೊಡ್ಡ ಆಂದೋಲನ ರೂಪದಲ್ಲಿ ಹಸಿರು ಕ್ರಾಂತಿ ಮುಖೇನ 300 ದಶಲಕ್ಷ ಟನ್ ಆಹಾರ ಉತ್ಪಾದನೆ ಬೆಳೆಯುವಂತಾಗಿದೆ. ದುರಂತವೆಂದರೆ ಹೆಚ್ಚು ಆಹಾರ ಉತ್ಪಾದನೆ ಮಾಡುವ ರೈತರು ಮಾತ್ರ ಶ್ರೀಮಂತರಾಗಿಲ್ಲ ಎಂದು ತಿಳಿಸಿದರು.

ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಓರ್ವ ರೈತನ ಕೃಷಿಯಲ್ಲಿ ಬೆಳೆಗಳಿಗೆ ವ್ಯಯಿಸುವ ಬಂಡವಾಳದ ಖರ್ಚನ್ನು ಲೆಕ್ಕ ಮಾಡಿ ರೈತರಿಗೆ ಆದಾಯದ ಬಗ್ಗೆ ಕಾಳಜಿ ವಹಿಸಿ, ಅಲ್ಲಿನ ಸರ್ಕಾರಗಳು ತೀರ್ಮಾನಿಸಿ ಕೃಷಿ ಮತ್ತು ರೈತರನ್ನು ರಕ್ಷಿಸುವ ಪದ್ಧತಿ ಹೊಂದಿವೆ. ಆದರೆ ಭಾರತದಲ್ಲಿ ಇನ್ನೂ ಇಂತಹ ಪದ್ಧತಿ ಜಾರಿಗೆ ಬಾರದಿರುವುದು ದುರಂತವೇ ಸರಿ. ಈ ಕಾರಣದಿಂದ ಅನೇಕ ಕೃಷಿಕರು ಸಾಲಗಾರರಾಗಿದ್ದಾರಲ್ಲದೇ, 23 ನಿಮಿಷಕ್ಕೊಬ್ಬ ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ ಎಂದರು.

# ಸ್ವಾತಂತ್ರ್ಯ, ಸಮಾನತೆ ಹೊಂದಿರುವ ಭಾರತದಲ್ಲಿ ಹುಟ್ಟಿರುವುದೇ ಸೌಭಾಗ್ಯ

**ಸೇಂಟ್ ಜಾನ್ಸ್ ಶಾಲೆಯ ಕಾರ್ಯಕ್ರಮದಲ್ಲಿ ನೇತ್ರ ತಜ್ಞ ಡಾ. ರವೀಂದ್ರನಾಥ್**



ದಾವಣಗೆರೆ, ಫೆ. 10- ಸ್ವಾತಂತ್ರ್ಯ, ಸಮಾನತೆ ಹೊಂದಿರುವ ಭಾರತ ದೇಶದಲ್ಲಿ ನಾವೆಲ್ಲರೂ ಹುಟ್ಟಿರುವುದೇ ನಮ್ಮ ಸೌಭಾಗ್ಯ. ಡಾ. ಬಿ.ಆರ್. ಅಂಬೇಡ್ಕರ್‌ರವರ ವ್ಯಕ್ತಿತ್ವವನ್ನು ಮೈಗೂಡಿಸಿ ಕೊಳ್ಳೋಣ ಎಂದು ದೃಷ್ಟಿ ಆಸ್ಪತ್ರೆಯ ನೇತ್ರ ತಜ್ಞ ಡಾ. ಹೆಚ್.ಎಂ. ರವೀಂದ್ರನಾಥ್ ತಿಳಿಸಿದರು.

ಅವರು ನಗರದ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ನಡೆದ 74ನೇ ಗಣರಾಜ್ಯೋತ್ಸವ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ನಡೆಸಿಕೊಟ್ಟ ಪಥ ಸಂಚಲನವನ್ನು ಶ್ಲಾಘಿಸಿ, ವಿದ್ಯಾರ್ಥಿಗಳಲ್ಲಿರುವ ಶಿಸ್ತು ಮತ್ತು ಸಂಯಮದ ಬಗ್ಗೆ ಡಾ. ರವೀಂದ್ರನಾಥ್ ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್.ಅನಿಲ್ ಕುಮಾರ್ ಮತ್ತು ಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ ಮಾತನಾಡಿ, ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ಮಾಡದೆ, ಉತ್ತಮ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ತಿಳಿ ಹೇಳಿದರು. ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕ ಟಿ.ಎಂ. ಗಿರೀಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಬೀಡಿ ಕಾರ್ಮಿಕರ ಸಮಸ್ಯೆ : ಧರಣಿ ಹಿಂದಕ್ಕೆ

ದಾವಣಗೆರೆ, ಫೆ.10- ಬೀಡಿ ಕಾರ್ಮಿಕರ ಕಾಲೋನಿಯ ಸಮಸ್ಯೆಗಳ ಕುರಿತು ನಡೆಸುತ್ತಿರುವ ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆದಿರುವುದಾಗಿ ಬಹುಜನ ಸಮಾಜ ಪಾರ್ಟಿ ರಾಜ್ಯ ಕಾರ್ಯದರ್ಶಿ ಹೆಚ್.ಮಲ್ಲೇಶ್ ತಿಳಿಸಿದ್ದಾರೆ. ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಹರ ನಗರದ ಬೀಡಿ ಕಾರ್ಮಿಕರ ಕಾಲೋನಿಯಲ್ಲಿದ್ದ ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸುವಂತೆ ಒತ್ತಾಯಿಸಿ ಧರಣಿ ನಡೆಸಲಾಗುತ್ತಿತ್ತು.

ಇದೀಗ ಪೌರಾಯುಕ್ತರು ಬೀಡಿ ಕಾರ್ಮಿಕ ಕಾಲೋನಿಯಲ್ಲಿರುವ ಮನೆಗಳಿಗೆ ಖುದ್ದು ಭೇಟಿ ನೀಡಿ ಸಮೀಕ್ಷೆ ನಡೆಸಿ ಫಲಾನುಭವಿಗಳನ್ನು ಗುರುತಿಸಿ ಮಾಹಿತಿ ಪಡೆದಿರುವ ಮೇರೆಗೆ ಹಾಗೂ ಇನ್ನೂ 15 ದಿನದೊಳಗೆ ಹಕ್ಕುಪತ್ರ, ಸಾಲಮನ್ನಾ ಪತ್ರ ಹಾಗೂ ಖಾತೆ ನೋಂದಣಿ ಮಾಡಿಸಿಕೊಡುವ ಭರವಸೆ ಮೇರೆಗೆ ಧರಣಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ ಎಂದವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪಾರ್ಟಿಯ ಜಿಲ್ಲಾಧ್ಯಕ್ಷ ಡಿ.ಹನುಮಂತಪ್ಪ, ಮುಕ್ತಿಯಾರ್ ಅಹಮದ್, ರಜಾಕ್ ವುಲ್ಲಾ ಉಪಸ್ಥಿತರಿದ್ದರು.

# ಜಾತ್ರೆಗೆ ಆಹ್ವಾನ ನೀಡಿರಲಿಲ್ಲ : ನಟ ಸುದೀಪ್ ಸ್ಪಷ್ಟನೆ



ಬೆಂಗಳೂರು, ಫೆ. 10 - ಹರಿಹರದ ರಾಜನಹಳ್ಳಿಯಲ್ಲಿ ನಡೆದ ವಾಲ್ಮೀಕಿ ಜಾತ್ರಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತಮಗೆ ಆಹ್ವಾನ ನೀಡಿರಲಿಲ್ಲ ಎಂದು ನಟ ಸುದೀಪ್ ಸ್ಪಷ್ಟನೆ ನೀಡಿದ್ದಾರೆ.

ಗುರುವಾರ ನಡೆಯುವ ಕಾರ್ಯಕ್ರಮದಲ್ಲಿ ಸುದೀಪ್ ಬರಲಿದ್ದಾರೆ ಎಂದು ತಿಳಿಸಲಾಗಿತ್ತು. ಆದರೆ, ಸುದೀಪ್ ಕಾರ್ಯಕ್ರಮಕ್ಕೆ ಬರದ ಕಾರಣ ಬೇಸರಗೊಂಡಿದ್ದ ಅಭಿಮಾನಿಗಳು ವೇದಿಕೆ ಮುಂಭಾಗದ ಕುರ್ಚಿಗಳನ್ನು ಮುರಿದು ಆಕ್ರೋಶ ವ್ಯಕ್ತಪಡಿಸಿದ್ದರು. ವೇದಿಕೆ ಬಳಿಯ ಬ್ಯಾರಿಕೇಡ್‌ಗಳನ್ನು ನೆಲಕ್ಕುರುಳಿಸಿದ್ದ ಅಭಿಮಾನಿಗಳನ್ನು ನಿಯಂತ್ರಿಸಲು ಮುಂದಾದ ಪೊಲೀಸರಲ್ಲಿ ಮೂವರು ಗಾಯಗೊಂಡಿದ್ದರು.

ಈ ಘಟನೆಯ ಹಿನ್ನೆಲೆಯಲ್ಲಿ ಹೇಳಿಕೆ ನೀಡಿರುವ ಸುದೀಪ್, ರಾಜನಹಳ್ಳಿಯ ಘಟನೆ ತಿಳಿದು ಬೇಸರವಾಯಿತು. ನನಗೆ ಕಾರ್ಯಕ್ರಮದ ಆಯೋಜಕರಿಂದ ಆಹ್ವಾನವಿರಲಿಲ್ಲ. ಕಾರ್ಯಕ್ರಮದ ಕುರಿತು ಮಾಹಿತಿಯೂ ಇರಲಿಲ್ಲ. ನಾನು ಒಪ್ಪಿಕೊಂಡ ಕಾರ್ಯಕ್ರಮಗಳನ್ನು ತಪ್ಪಿಸಿದವನಲ್ಲ ಎಂದಿದ್ದಾರೆ.

# ಮುದೇನೂರಿನಲ್ಲಿ ಇಂದು 'ಚಿಂತನ-ಮಂಥನ' ಸಭೆ

ದಾವಣಗೆರೆ, ಫೆ. 10- ಸುಸ್ಥಿರ ಕರ್ನಾಟಕ ಬಳಗದ ವತಿಯಿಂದ ಫೆ. 11 ಮತ್ತು 12 ರಂದು ಎರಡು ದಿನಗಳ ಕಾಲ ಮೊದಲನೇ ಚಿಂತನ ಮಂಥನ ಸಭೆಯನ್ನು ರಾಣೇಬೆನ್ನೂರು ತಾಲ್ಲೂಕಿನ ಮುದೇನೂರಿನ ಪ್ರಗತಿಪರ ರೈತ ಶಂಕರಗೌಡರ ತೋಟದಲ್ಲಿ ಏರ್ಪಡಿಸಲಾಗಿದೆ ಎಂದು ಜೆಡಿಯು ರಾಜ್ಯಾಧ್ಯಕ್ಷ ಮಹಿಮಾ ಜೆ. ಪಟೇಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾಜ, ರಾಜಕಾರಣ, ಆರೋಗ್ಯ, ಆಡಳಿತ, ಹಣಕಾಸಿನ ವ್ಯವಸ್ಥೆ ಸೇರಿದಂತೆ, ರಾಜ್ಯದ ಎಲ್ಲಾ ರಂಗಗಳಲ್ಲೂ ಸಾವಯುವ ಚಿಂತನೆ ತರುವ ಉದ್ದೇಶದಿಂದ ಕೆಲವರು ಕಾರ್ಯನಿರ್ವಹಿಸುತ್ತಿದ್ದಾರೆಂದು ಹೇಳಿದರು.

ಎಲ್ಲಾ ವಿಭಾಗಗಳ ಸಾವಯುವ ಚಿಂತಕರನ್ನು ಸೇರಿಸಿ ಎರಡು ದಿನಗಳ ಕಾಲ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಚಿಂತನೆ ನಡೆಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶಂಕರಗೌಡ್ರು, ಮಹಿಮಾ ಜೆ. ಪಟೇಲ್, ರಾಘುವ, ಬಾ. ಸಂಜೀವ್ ಕುಲಕರ್ಣಿ, ಚುಕ್ಕಿ ನಂಜುಂಡ ಸ್ವಾಮಿ, ನಂದಿನಿ ಜಯರಾಂ, ಕೆ.ಟಿ. ಗಂಗಾಧರ್ ಮತ್ತಿತರರು ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

ಐಕಾಂತಿಕಾದ ರಾಘುವ ಮಾತನಾಡಿ, ತಾಂತ್ರಿಕತೆ, ಆಧುನಿಕತೆ ಹೆಸರಿನಿಂದ ನಾವು ಎಲ್ಲಾ ರಂಗಗಳಲ್ಲೂ ಕೃತಕ ಜೀವನ ನಡೆಸುತ್ತಿದ್ದು, ಅದನ್ನು ಬಿಟ್ಟು ನಮ್ಮ ಸಾವಯವ ಬದುಕಿಗೆ ಮರಳೋಣ ಎನ್ನುವ ಉದ್ದೇಶದಿಂದ ಈ ಸಭೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

# ನಾಳೆ ಡ್ರಾಯಿಂಗ್-ಪೇಂಟಿಂಗ್ ಕಾರ್ಯಾಗಾರ

ದಾವಣಗೆರೆ, ಫೆ.10- ನಗರದ ಎಂ.ಸಿ. ಕಾಲೋನಿ 'ಬಿ' ಬ್ಲಾಕ್, ವಾಟರ್ ಟ್ಯಾಂಕ್ ಪಾರ್ಕ್ ಹತ್ತಿರ ಇರುವ ಚಿರಂತನ ಅಕಾಡೆಮಿ ವತಿಯಿಂದ ನಾಡಿದ್ದು ದಿನಾಂಕ 12ರ ಭಾನುವಾರ ಸಂಜೆ 4 ರಿಂದ 6 ಗಂಟೆವರೆಗೆ ಉಚಿತವಾಗಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಕಾರ್ಯಾಗಾರ ಏರ್ಪಡಿಸಿದೆ. ವಿವರಕ್ಕೆ ಸಂಪರ್ಕಿಸಿ : 9535656163.

# 15 ರಂದು ಇಮಾಂ ಸ್ಮಾರಕ ಪ್ರಶಸ್ತಿ ಪ್ರದಾನ



**ಜಗಳೂರು**

ಜಗಳೂರು, ಫೆ.10- ಜೆಎಂ ಇಮಾಂ ಟ್ರಸ್ಟ್ ವತಿಯಿಂದ ಜೆಎಂ ಇಮಾಂ ಸಾಹೇಬರ 125 ನೇ ಜಯಂತಿ ಅಂಗವಾಗಿ ಜೆಎಂ ಇಮಾಂ ಸ್ಮಾರಕ ರಾಜ್ಯ ಪ್ರಶಸ್ತಿ ಪ್ರದಾನ ಹಾಗೂ ಜೆಎಂ ಇಮಾಂ ವಿರಚಿತ 'ಮೈಸೂರು ಆಗ ಮತ್ತು ಈಗ ಪುಸ್ತಕ' ಬಿಡುಗಡೆ ಕಾರ್ಯಕ್ರಮ ಪಟ್ಟಣದ ಇಮಾಂ ಶಾಲಾ ಆವರಣದಲ್ಲಿ ಫೆ.15 ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಾಹಿತಿ ಲೀಡ್ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಎನ್.ಟಿ.ಎರ್ರಿಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ವಿಧಾನಸೌಧದ ಹೆಬ್ಬಾಗಿಲಿನಲ್ಲಿನ ಸರ್ಕಾರದ ಕೆಲಸ ದೇವರ ಕೆಲಸ ಎಂಬ ವಾಕ್ಯದ ಕೃತಿಕಾರರಾಗಿರುವ ಧೀಮಂತ ರಾಜಕಾರಣಿಯಾಗಿ ಮೈಸೂರು ಸಂಸ್ಥಾನದಲ್ಲಿ ಸೇವೆಗೈದ ಸಾಹಿತ್ಯ, ಕೃಷಿ, ಶಿಕ್ಷಣ, ನೀರಾವರಿ ಕ್ಷೇತ್ರಗಳಲ್ಲಿ ತನ್ನದೇ ಛಾಪು ಮೂಡಿಸಿದ ಕೀರ್ತಿ ಇಮ್ಮಣ್ಣ ಅವರಿಗೆ ಸಲ್ಲುತ್ತದೆ. ತಾಲ್ಲೂಕಿನಲ್ಲಿ ಕೆರೆಗಳನ್ನು ನಿರ್ಮಿಸಿ, ನೀರಾವರಿ ಕನಸು ಕಂಡವರು. ಅವರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಂ ಇಮಾಂ ಟ್ರಸ್ಟ್‌ನ ಅಧ್ಯಕ್ಷ ಜೆ.ಕೆ.ಹುಸೇನ್‌ಮಿಯ್ಯಾ ಸಾಹೇಬ್, ಉದ್ಘಾಟನೆಯನ್ನು ನಾಡೋಜ ವಿದ್ವಾಂಸ ಡಾ. ಗೋ.ರು.ಚನ್ನಬಸಪ್ಪ, ಮುಖ್ಯ ಅತಿಥಿಗಳಾಗಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ.ರಾಮಚಂದ್ರಪ್ಪ, ಬಿಇಓ ಉಮಾದೇವಿ, ಭಾಗವಹಿಸಲಿದ್ದು, ಅಭಿನಂದನಾ ನುಡಿಯನ್ನು ಹಂಪಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಸಾಹಿತಿ ಡಾ.ರಹಮತ್ ತರೀಕೆರೆ ನೆರವೇರಿಸಲಿದ್ದಾರೆ, ಅಲ್ಲದೆ ಹಲವಾರು ಸಾಹಿತಿಗಳು ಟ್ರಸ್ಟ್ ನ ಸಮಿತಿಯವರು, ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಾಹಿತಿ ಡಿ.ಸಿ. ಮಲ್ಲಿಕಾರ್ಜುನಪ್ಪ ಮಾತನಾಡಿ, ಇಮಾಂ ಸಾಹೇಬರ ಸ್ಮರಣೆಗಾಗಿ ಪ್ರತಿ ವರ್ಷದಂತೆ ಈ ಬಾರಿಯೂ 'ರಾಜ್ಯ ಪ್ರಶಸ್ತಿಯನ್ನು' ಹಂಪಿ ವಿಶ್ವವಿದ್ಯಾನಿಲಯದಲ್ಲಿ ನಿವೃತ್ತ ಪ್ರಾಧ್ಯಾಪಕ ರಂಜಾನ್ ದರ್ಗಾ ಅವರಿಗೆ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಾಹಿತಿ ಡಾ. ನಿಬಗೂರು ರಾಜಪ್ಪ, ಬಸವರಾಜಯ್ಯ, ನಾಗರಾಜ್ ಉಪಸ್ಥಿತರಿದ್ದರು.

# ನಂದಗೋಕುಲ ಶಾಲೆ : ಗಣರಾಜ್ಯೋತ್ಸವ



ದಾವಣಗೆರೆ, ಫೆ. 10- ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಆಚರಿಸಲಾಯಿತು. ನಂದಗೋಕುಲ ಶಾಲೆಯ ಅಧ್ಯಕ್ಷ ವೈ.ಬಿ. ಸತೀಶ್ ಧ್ವಜಾರೋಹಣ ನೆರವೇರಿಸಿದರು. ಕಾರ್ಯದರ್ಶಿ ಶ್ರೀಮತಿ ಅನುಸೂಯ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಿವೃತ್ತ ನೌಕರರ ಸಂಘದಿಂದ ಕ್ರೀಡಾಕೂಟ

ದಾವಣಗೆರೆ, ಫೆ. 10 - ನಗರದ ಬಾಪೂಜಿ ಪ್ರೌಢಶಾಲೆ ಆವರಣದಲ್ಲಿ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಕ್ರೀಡಾ ಕೂಟವನ್ನು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಪಾಲಾಕ್ಷ ಉದ್ಘಾಟನೆ ಮಾಡಿ ಮಾತನಾಡಿ, ನಿವೃತ್ತ ನೌಕರರ ಮನೋವಿಕಾಸಕ್ಕೆ ಕ್ರೀಡಾ ಕೂಟಗಳು ಸಹಕಾರಿ ಎಂದರು.

ಅಧ್ಯಕ್ಷತೆಯನ್ನು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎ.ಆರ್. ಉಜ್ಜನಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಜ್ಯ ನಿವೃತ್ತ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಎಸ್.ಗುರುಮೂರ್ತಿ, ಡಾ.ಹೆಚ್.ಎಂ ವೀರಯ್ಯ, ಕಾರ್ಯದರ್ಶಿ ಬಿ.ಕೆ. ರೇಣುಕಮೂರ್ತಿ, ಸಂಘದ ಪದಾಧಿಕಾರಿಗಳಾದ ಬಿ.ಎಂ. ಮಲ್ಲಿಕಾರ್ಜುನಯ್ಯ, ಜಿ.ಸಿ. ಕಲ್ಲಪ್ಪ ಹಾಗೂ ಇತರರು ಭಾಗವಹಿಸಿದ್ದರು. ಕ್ರೀಡಾ ಕೂಟವನ್ನು ಬಾಪೂಜಿ ಪ್ರೌಢಶಾಲೆ ಹಿರಿಯ ದೈಹಿಕ ಶಿಕ್ಷಕ ಬಿ.ಇ. ರವಿಕುಮಾರ್ ಹಾಗೂ ಸಿ.ಹನುಮಂತಪ್ಪ ನಡೆಸಿಕೊಟ್ಟರು.



# ನಗರದಲ್ಲಿ ಇಂದು 'ಸೃಷ್ಠಿ'

ಶ್ರೀ ರಾಘುವೇಂದ್ರ ವಿದ್ಯಾನಿಕೇತನ ಶಾಲೆಯ ವತಿಯಿಂದ ಇಂದು ಮಧ್ಯಾಹ್ನ 3 ಗಂಟೆಗೆ ನಿಮಿಷಾಂಬ ಸಮುದಾಯ ಭವನದಲ್ಲಿ 'ಸೃಷ್ಠಿ' ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಎ.ಸಿ. ಸವಿತಾ, ಶ್ರೀ ರಾಘುವೇಂದ್ರ ಹೆಲ್ತ್ ಅಂಡ್ ಎಜುಕೇಶನಲ್ ಟ್ರಸ್ಟ್ ಮ್ಯಾನೇಜಿಂಗ್ ಡೈರೆಕ್ಟರ್ ಮಂಜೂಷ ಸೈಮನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ರಾಘುವೇಂದ್ರ ವಿದ್ಯಾನಿಕೇತನ ಶಾಲೆಯ ಮುಖ್ಯೋಪಾಧ್ಯಾಯ ಎಂ.ಎಸ್. ಮಂಜುನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

# ರಾಣೇಬೆನ್ನೂರಿನಲ್ಲಿ ನಾಡಿದ್ದು 'ಅನ್ನದಾತನ ಅಳಲು' ಚಿತ್ರ ಬಿಡುಗಡೆ

ರಾಣೇಬೆನ್ನೂರು, ಫೆ.10- ಸ್ಥಳೀಯ ಶ್ರೀ ಲಕ್ಷ್ಮಿನರಸಿಂಹ ಹಾಗೂ ಶ್ರೀ ವರಸಿದ್ದಿ ವಿನಾಯಕ ಕಿರು ಚಿತ್ರ ನಿರ್ಮಾಪಕ ತಂಡದಿಂದ ತಯಾರಿಸಿದ 'ಅನ್ನದಾತನ ಅಳಲು' ಚಿತ್ರದ ಬಿಡುಗಡೆ ಸಮಾರಂಭ ಇದೇ ದಿನಾಂಕ 14 ರಂದು ಕಾಕಿ ಜನಸೇವಾ ಸಭಾ ಭವನದಲ್ಲಿ ನಡೆಯಲಿದೆ. ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಉದ್ಘಾಟಿಸಲಿದ್ದು, ನಿರ್ಮಾಪಕರ ಸಂಘದ ಎನ್.ಎಂ. ಸುರೇಶ್ ಬಿಡುಗಡೆ ಮಾಡುವರು. ಶಾಸಕ ಅರುಣಕುಮಾರ, ಕೈಗಾರಿಕಾ ನಿಗಮದ ನಿರ್ದೇಶಕಿ ಭಾರತಿ ಅಳವಂಡಿ, ಎಂ.ಎಸ್. ಅರಕೇರಿ, ಪ್ರಕಾಶ ಬುರಡಿಕಟ್ಟಿ, ರವೀಂದ್ರಗೌಡ ಪಾಟೀಲ, ಶ್ರೀನಿವಾಸ ಕಾಕಿ ಅತಿಥಿಗಳಾಗಿದ್ದು, ಆರ್. ಎಂ. ಕುಬೇರಪ್ಪ ಅಧ್ಯಕ್ಷತೆ ವಹಿಸುವರು. ತೆರಿಗೆ ಅಧಿಕಾರಿ ಪ್ರಾಣೇಶ ಜಮಖಂಡಿ, ಚಿತ್ರ ನಿರ್ದೇಶಕ ಬಿ.ಎ.ಸುನೀಲ ಮತ್ತು ಧಾರಾವಾಹಿ ಸಂಭಾಷಣಾ ಕಾರ್ತಿ ಗಿರಿಜಾ ಮಂಜುನಾಥ ಅವರುಗಳನ್ನು ಸನ್ಮಾನಿಸಲಾಗುವುದು.


**ಸೈಟು, ನೆಲ ಬಾಡಿಗೆಗೆ ಇದೆ**
ಸೈಟ್ ಅಳತೆ 44x60 = 2640 ಸ್ಕೇರ್‌ಪೂಟ್. ಪ್ಲಾಟ್ ನಂ.6, ನೂತನ ಕಾಲೇಜ್ ಮೇನ್ ರೋಡ್ ಬಸವೇಶ್ವರ ಸರ್ವೀಸ್ ಸೆಂಟರ್ ಪಕ್ಕ, ದಾವಣಗೆರೆ.
ಸಂಪರ್ಕಿಸಬೇಕಾದ ಮೊಬೈಲ್ ನಂ.
81056 01900, 63627 53030

**ಸೈಟ್ ಮಾರಾಟಕ್ಕೆ (25 ಲಕ್ಷಕ್ಕೆ)**
ಸರ್ಕಾರಿ ನೌಕರರ ಬಡಾವಣೆ ಶಾಮನೂರು ಬೈಪಾಸ್ 30×36 ಅಂದಾಜು (1076 ಅಡಿ) ಪಶ್ಚಿಮ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409
ಸೈಟ್ ಮನೆ ಮಾರಾಟಕ್ಕೆ, ಕೊಳ್ಳುವುದಕ್ಕೆ ವಿಚಾರಿಸಿ.

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಲೇಔಟ್ ಎ ಬ್ಲಾಕ್, ಬಾಪೂಜಿ ಎಂಬಿಎ ಫಾರ್ಮಸಿ ಕಾಲೇಜು ಹತ್ತಿರದಲ್ಲಿ 3BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
70227-94155

**ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ನಗರದಲ್ಲಿ 20x30 ಅಳತೆಯ 2 ಬೆಡ್ ರೂಮಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ.
94482 33389

**1BHK ಮನೆ ಲೀಸ್‌ಗೆ ಇದೆ**
ಬನಶಂಕರಿ ಬಡಾವಣೆ ವಿದ್ಯಾನಗರದಲ್ಲಿ ವಿವೇಕಾನಂದ ಶಾಲೆ ಹತ್ತಿರ 1 BHK ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ.
99645 11172

**ಸೈಟ್, ಮನೆ, ಮಾರಾಟಕ್ಕೆ, ಖರೀದಿಗೆ**
ಪಿ.ಜೆ. ಎಕ್ಸ್‌ಟೆನ್ಷನ್ : ಸೈಟ್ 40x60, ಎಂ.ಸಿ.ಸಿ. 'ಬಿ' ಬ್ಲಾಕ್ : ಹೌಸ್ ಸೈಟ್ 40x60, ಆಂಜನೇಯ ಬಡಾವಣೆ ಹೌಸ್ : 40x60, ಇನ್‌ವೆಸ್ಟ್‌ಮೆಂಟ್ ಮಾಡಲು ಸೈಟ್‌ಗಳು ಸಿಗುತ್ತವೆ. ಗ್ಲಾಸ್ ಹೌಸ್, ಸರ್ಕಾರಿ ನೌಕರರ ಬಡಾವಣೆ, ಕುಂದುವಾಡ ಕೆರೆ, ಯುನಿವರ್ಸಿಟಿ ಹಿಂಭಾಗ. ವಿವೇಕಾನಂದ ಬಡಾವಣೆ 30x50.
ವೀರೇಶ್
76768 57676

**ಮನೆ ಬಾಡಿಗೆಗೆ ಇದೆ**
1st ಫ್ಲೋರ್, 2 ಬೆಡ್ ರೂಂ ಎಸ್.ಎಸ್. ಲೇಔಟ್, B ಬ್ಲಾಕ್, ನವೋದಯ ( Edu Asia) school ಹತ್ತಿರ, ದಾವಣಗೆರೆ
90196 81452

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ ಮೊದಲನೆ ಮಹಡಿ, 2BHK # 3815, 4th Cross, 18th Main, ಬಾಪೂಜಿ ಸ್ಕೂಲ್ ಹತ್ತಿರ, ಕುವೆಂಪು ನಗರ, ದಾವಣಗೆರೆ - 577004.
94802 49340

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ ಯುರೋ ಸ್ಕೂಲ್ ಹತ್ತಿರ, 35x60 ಉತ್ತರ-ಪೂರ್ವ ಕಾರ್ನರ್. ಡಾಲರ್ಸ್ ಕಾಲೋನಿಯಲ್ಲಿ 30x45 ಪೂರ್ವ, 30x50 ಉತ್ತರ, ವಿನಾಯಕ ಬಡಾವಣೆ, ಆನಂದ ಅಕಾಡೆಮಿ ಕಾಲೇಜ್ ಹಿಂಭಾಗ. 30x57 ಉತ್ತರ ಎರಡು ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**EC / ಇಸಿ, E-swathu & Khatha Change Building Licence**
Call :
96118-66449

**ನೆಲ ಬಾಡಿಗೆಗೆ ಇದೆ**
ದಾವಣಗೆರೆ ಸಮೀಪದ ಬಾತಿ ಮುಖ್ಯ ರಸ್ತೆಯಲ್ಲಿ 100x80 ಸೈಟ್ ಬಾಡಿಗೆಗೆ ಇದೆ. ಡಾಬಾ, ಷೋರೂಂ, ಸರ್ವೀಸ್ ಸೆಂಟರ್‌ಗೆ ಬಹಳ ಸೂಕ್ತವಾದ ಜಾಗ. ಸಂಪರ್ಕಿಸಿ :
94498 24871, 94482 68895

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಶರಭೇಶ್ವರ ಊಟದ ಹೋಟೆಲ್‌ನಲ್ಲಿ ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಮತ್ತು ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ, ವಸತಿ ಸೌಲಭ್ಯ ನೀಡಲಾಗುವುದು.
ಬಸವರಾಜಯ್ಯ ಹಿರೇಮಠ
94489 80070, 88847 04025

**ಅಕೌಂಟೆಂಟ್ ಬೇಕಾಗಿದ್ದಾರೆ**
ಅರ್ಹತೆ - TALLY - DRIVE - XL
ಸಂಬಳ - 12,000,
ಸಂಕೇಶ್ವರ ಇಂಡಸ್ಟ್ರೀಸ್, ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
9738708495, 9901869371

**ಬೇಕಾಗಿದ್ದಾರೆ**
ತರುಣ್ ಎಂಟರ್ ಪ್ರೈಸಸ್
ದ್ವಿಚಕ್ರ ವಾಹನಗಳ ಸೀಟ್ ಕವರ್ ಅಂಗಡಿಯಲ್ಲಿ ಹೆಲ್ಪರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
98441 90232

**CHANGE OF NAME**
I SYED BARAKATH ALI (old name) S/o Syed Ahamed Sab Resident of # 1623/12, 3rd cross, Ahamed Nagar, Davangere-577001 Dist, Karnataka has changed my name as SYED BARKATH ALI vide affidavit dated 10.02.2023 sworn before Notary I.P Brahmakumar, Davangere, Henceforth all my transactions and dealings will be in my new name SYED BARKATH ALI
Sd/- SYED BARKATH ALI

**ಸೈಟು ಮಾರಾಟಕ್ಕಿದೆ**
ಹಳೆ ಬನಶಂಕರಿ ಬಡಾವಣೆಯಲ್ಲಿ NH ರಸ್ತೆ ಅಂಡರ್ ಪಾಸ್‌ಗೆ ಹತ್ತಿರದಲ್ಲಿರುವ 30x50 ಅಡಿ ಅಳತೆಯ ಪಶ್ಚಿಮ ದಿಕ್ಕಿನ ಸೈಟು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಫೋ. : 97390 04921

**ಮನೆ ಬಾಡಿಗೆಗಿದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ ಡೋರ್ ನಂ. 144 ನಂಬರಿನ ಮನೆಯ ಒಂದನೇ ಮಹಡಿಯಲ್ಲಿ ನೀರಿನ ಸೌಕರ್ಯ ಇರುವ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94480-47506

**ಹೊಸ ಮನೆಗಳು ಮಾರಾಟಕ್ಕಿವೆ**
30x40, 30x50, ಎಸ್. ಎಸ್. ಲೇಔಟ್‌ನಿಂದ DC ಆಫೀಸ್ ಕಡೆ ಹೋಗುವ ರಿಂಗ್ ರೋಡ್ ಹತ್ತಿರ ಮತ್ತು ಮಹಾಲಕ್ಷ್ಮಿ ಲೇಔಟ್ ಹತ್ತಿರ.
ಸಂಪರ್ಕಿಸಿ.
97425 12125

**ಸೈಟು ಮಾರಾಟಕ್ಕಿದೆ**
ಸಿದ್ದರಾಮೇಶ್ವರ ಬಡಾವಣೆ ನಿಟ್ಟುವಳ್ಳಿ ನ್ಯೂ ಎಕ್ಸ್‌ಟೆನ್ಷನ್ 39x61 ಉತ್ತರ ಅಭಿಮುಖ
ಸಂಪರ್ಕಿಸಿ :
94805 98917, 84948 20288

**Room for Rent**
1 Bed Room, bathroom Ideal for students or Bachelors, Second floor, # 1962A/3, Vidyanagar, 1st Busstop, Behind Cafe Coffee Day
99019 03072

**WANTED**
* Warden (Preferably Ex-army)
* Physical Education Teacher (MP.Ed.)
* Security Guard (Preferably Ex-army)
ANMOL PUBLIC SCHOOL
CONTACT
96207 68987, 94483 91963

**ಮನೆ ಲೀಸ್/ಬಾಡಿಗೆಗೆ**
#1846/178 ಗ್ರೌಂಡ್ ಫ್ಲೋರ್, 2 BHK, ಕಾರ್ನರ್ ಮನೆ, ವಿನಾಯಕ ಬಡಾವಣೆ, ವಿದ್ಯಾನಗರ, ಸೌಜನ್ಯ ಪಾರ್ಕ್ ಹತ್ತಿರ, ಲೀಸ್-ಬಾಡಿಗೆಗೆ ಇದೆ.
ಫೋ. : 98864 11116

**ಮನೆ ಮಾರಾಟಕ್ಕೆ**
ಸಾಯಿಬಾಬಾ ಲೇಔಟ್ 30x50, ರಾಘವೇಂದ್ರ ಲೇಔಟ್ 30x40, ಡೂಪ್ಲೆಕ್ಸ್ 25x30, 23x30, ಜಯನಗರ 30x40, DCM ಹತ್ತಿರ 30x40, ಹೊಸ ಮನೆಗಳು ಮಾರಾಟಕ್ಕಿವೆ.
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

**ಜಮೀನು ಮಾರಾಟಕ್ಕಿದೆ**
2 ಎಕರೆ ನೀರಾವರಿ ಜಮೀನು ಮಾರಾಟಕ್ಕೆ ಇದೆ.
ಮತ್ತಿ ಗ್ರಾಮ
94480 03997

**ಮಾರಾಟಕ್ಕೆ**
* ಶಕ್ತಿನಗರ(ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು,3 ಫ್ಲೋರ್ ಇರುವ ಮನೆ 20×30, * ಬನಶ್ರೀ ಲೇಔಟ್ (ಶಾಮನೂರು) ಸೈಟ್ (ಉತ್ತರ) 30x50, * LBK ಲೇಔಟ್ (ಯರಗುಂಟೆ ರೋಡ್) ಸೈಟುಗಳು 30×40, * ಲಕ್ಷ್ಮಿ ಲೇಔಟ್ (ಜಯನಗರ) ಸೈಟ್ (ಪೂರ್ವ)25×35
78996 36597, 99165 25828

**ಮನೆ ಲೀಸ್‌ಗೆ ಇದೆ**
1BHK ವಿತ್ ಅಟ್ಯಾಚ್, 2ನೇ ಮಹಡಿ ಮನೆ ಲೀಸ್‌ಗೆ ಇದೆ. ಮನೆ ನಂ. 389/G-54, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ 'ಎ'ಬ್ಲಾಕ್ ದಾವಣಗೆರೆ.
98447 10844, 88843 62134

**ಸೈಟ್ ಮಾರಾಟಕ್ಕೆ (ಬಂಗ್ಲೆ)**
ಶಾಮನೂರ್ ಶಿವ ಪಾರ್ವತಿ ಲೇಔಟ್ ನಲ್ಲಿ 50×100 ಪೂರ್ವ.
ಕಿರಣ್ ಬೂಸ್ನೂರ್ (ಏಜೆಂಟ್)
97315- 63409
ನೇರವಾಗಿ ಹಳೆ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ. ಕೇವಲ ಅರ್ಧ (1/2%)ಕಮಿಷನ್ ಗೆ

**ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ**
ಶಕ್ತಿನಗರದಲ್ಲಿ ಚಿಕ್ಕಮನೆಗಳು ಬಾಡಿಗೆಗೆ ದೊರೆಯುತ್ತವೆ.
ಸಂಪರ್ಕಿಸಿ.
94484 39639

**ಕಾಂಟ್ರ್ಯಾಕ್ಟರ್ ಬೇಕಾಗಿದ್ದಾರೆ**
(ಗುತ್ತಿಗೆದಾರರು) ಸಿ.ಎಸ್.ಐ. ಕಾಂತಿ ದೇವಾಲಯ, ಹಳೆಬಾತಿ ಕ್ರೈಸ್ತ ಸಮುದಾಯ ಭವನದ ನಿರ್ಮಾಣ ಕಾರ್ಯಕ್ಕೆ ಪ್ರಥಮ ದರ್ಜೆಯ ಕಂಟ್ರಾಕ್ಟರ್ ಬೇಕಾಗಿದ್ದಾರೆ.
(ಷರತ್ತುಗಳು ಅನ್ವಯಿಸುತ್ತವೆ)
94800 39905 91108 12227

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ, 60x40 East, 30x40 East,
Rate : 1950.00
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕರ್ನಾಟಕ ಗೃಹ ಮಂಡಳಿಯಲ್ಲಿ ಜೋಡಿ ಸೈಟುಗಳು ಮಾರಾಟಕ್ಕಿವೆ**
40x60, 40x60 South ಅಕ್ಕ-ಪಕ್ಕ, 120 ಅಡಿ ರೋಡ್‌ಗಿದೆ. 30x40, 30x40 South ಅಕ್ಕ-ಪಕ್ಕ, 30x40, 30x40 West ಅಕ್ಕ-ಪಕ್ಕ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹಡದಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಶೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 3800 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು
ಸಂಪರ್ಕಿಸಿ.
96205 95579

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ಧರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**ನಿವೇಶನ ಮಾರಾಟಕ್ಕಿದೆ**
BSNL ಆಫೀಸ್ ಹತ್ತಿರ ಶಂಕರ್ ವಿಹಾರ್ ಬಡಾವಣೆಯಲ್ಲಿ ಡೋರ್ ನಂಬರ್ ಇರುವ 30x80 ಅಡಿವುಳ್ಳ ನಿವೇಶನ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ.
94810 93644

**ಬೇಕಾಗಿದ್ದಾರೆ**
18-25 ವರ್ಷದೊಳಗಿನ SSLC ಪಾಸ್ ಅಥವಾ ಫೇಲಾದ ಯುವಕರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ.
ಫೋ. : 97419 13331

**ಬೇಕಾಗಿದ್ದಾರೆ**
ಹೋಟೆಲ್ ಪುಡೀಸ್, ಚರ್ಚ್ ರೋಡ್ (ತೊಗಟವೀರ ಕಲ್ಯಾಣ ಮಂಟಪ ಹತ್ತಿರ) ಲೇಡಿ ಕ್ಲೀನರ್, ವೆಯ್ಟರ್, ಕೌಂಟರ್ ಸೇಲ್ಸ್, ಸ್ಟೀವರ್ಡ್
ಫೋ. : 98861 56688

**ಸೈಟ್ ಮಾರಾಟಕ್ಕಿದೆ**
ಪೋದಾರ್ ಸ್ಕೂಲ್ (ಶಾಮನೂರು) ಹತ್ತಿರ 20x30 ಸೈಟ್ ಮಾರಾಟಕ್ಕಿದೆ.
ಸಂಪರ್ಕಿಸಿ.
95918 29780, 80731 78139

**ಡುಪ್ಲೆಕ್ಸ್ ಹೌಸ್ ಸೇಲ್**
ಯೂರೋ ಸ್ಕೂಲ್ (ಶಾಮನೂರು) ಹತ್ತಿರ ಸ್ವಂತಕ್ಕೆ ಕಟ್ಟಿಸಿಕೊಂಡಿರುವ ಡುಪ್ಲೆಕ್ಸ್ ಹೌಸ್ (30x50) ಮಾರಾಟಕ್ಕಿದೆ.
ಸಂಪರ್ಕಿಸಿ.
73492 00928

**ಮಳಿಗೆ ಬಾಡಿಗೆಗೆ ಇದೆ**
ಅಶೋಕ ರೋಡ್ 1st ಫ್ಲೋರ್ ಮತ್ತು ಹಿಂಬದಿಯ ಮಳಿಗೆ, ಈಶ್ವರ ರೇಡಿಯೋ & ಟಿವಿ ಎದುರು, ಜಯದೇವ ಸರ್ಕಲ್ ಹತ್ತಿರ D/O No. 407, ಮಳಿಗೆ ವಿಸ್ತೀರ್ಣ 1st ಫ್ಲೋರ್ ವಿಸ್ತೀರ್ಣ 10x100, ಹಿಂಬದಿಯ ಮಳಿಗೆ 10x50.
ಸಂಪರ್ಕಿಸಿ : ಉಲ್ಲಾಸ್
85498 16336

**ATTACH ROOM ಬಾಡಿಗೆಗೆ ಇದೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಪಾರ್ಕ್ ಹತ್ತಿರ ಲೇಡಿಸ್ ಅಥವಾ ವಿದ್ಯಾರ್ಥಿನಿಯರಿಗೆ ಮಾತ್ರ.
ಸಂಪರ್ಕಿಸಿ.
95357 55005

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗರು ಬೇಕಾಗಿದ್ದಾರೆ. ವಯೋಮಿತಿ 25 ರಿಂದ 30 ವರ್ಷ.
97385 23711

**KHB ಸೈಟುಗಳು ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95906-15776

**ರಕ್ತ ದಾನ ಶ್ರೇಷ್ಠ ದಾನ**

**ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ**
ರಶ್ಮಿ ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆಯಲ್ಲಿ ಯಾವುದೇ ಪದವಿ ಪಡೆದ ಹೆಣ್ಣು ಮಕ್ಕಳು (ವಾರ್ಡನ್) ಮತ್ತು ಇಂಗ್ಲಿಷ್ ಹಾಗೂ ವಿಜ್ಞಾನ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಲು
B.A, B.Sc, B.Ed
ವಿದ್ಯಾರ್ಹತೆಯುಳ್ಳ ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ.
ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ.
82771 67890

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
3ನೇ ಲಕ್ಕಿ ಡಿಪ್ ಡ್ರಾ ವಿನ್ನರ್
657
ಚೇತನ್ ವೀರಬಸಪ್ಪ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ 8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಹೋಟೆಲ್ ಮುರುಳಿ**
ಬಜೆಟ್ ದಮ್ ಬಿರಿಯಾನಿ ಸೆಂಟರ್
* 50 ರೂ. ಗೆ ಚಿಕ್ಕನ್ ದಮ್ ಬಿರಿಯಾನಿ
* 110 ರೂ. ಗೆ ಮಟನ್ ದಮ್ ಬಿರಿಯಾನಿ
ಸಮಯ : ಮಧ್ಯಾಹ್ನ 12ರಿಂದ 4 ಗಂಟೆ, ಸಂಜೆ 6-30ರಿಂದ 9-30, ಸ್ಥಳ : 2ನೇ ಮೇನ್, 15ನೇ ಕ್ರಾಸ್, ಅಮಿತ್ ಟಾಕೀಸ್ ಕಾಂಪ್ಲೆಕ್ಸ್, ವಿನೋಬನಗರ, ದಾವಣಗೆರೆ. (ಆನ್ ಲೈನ್ ಬುಕ್ಕಿಂಗ್ ಸಹ ಮಾಡಬಹುದು)
95912 76454, 98449 66555

**WE ARE HIRING**
Teachers for CBSE school. (All Subjects), Nursery to 10th
Qualification : B.Sc. B.Ed., M.Sc. B.Ed., BA. B.Ed
Salary: 25000-30000
Padmadeepa Residential School, DB Halli, Bhadravathi, Thaluku.
Send ur Resume to padmadeepapublicschool@gmail.com
Contact: 9164342779

**ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ.**
P. B. Road ಗೆ ಹತ್ತಿರವಾಗಿ 25x88 ಅಡಿ ಅಳತೆಯ ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕೆ ಇದೆ. ಸಂಪರ್ಕಿಸಿ :
Mohan Real Estate Agencies
M : 97424 34049

**ಮಾಲಾ ಇವೆಂಟ್ ಮ್ಯಾನೇಜ್‌ಮೆಂಟ್ & ವೆಡ್ಡಿಂಗ್ ಪ್ಲಾನರ್**
ಮದುವೆ ಮತ್ತು ಶುಭ ಸಮಾರಂಭಗಳಿಗೆ ಫ್ರೀ ವೆಡ್ಡಿಂಗ್ ಡ್ರೆಸ್‌ಗಳು ಮತ್ತು ಎಲ್ಲಾ ತರಹದ ಡ್ರೆಸ್‌ಗಳು ಬಾಡಿಗೆಗೆ ದೊರೆಯುತ್ತವೆ. ವೆಜ್-ನಾನ್ ವೆಜ್, ಕ್ಯಾಟರಿಂಗ್ ಲಭ್ಯವಿದೆ. ವೆಡ್ಡಿಂಗ್ ಫೋಟೋ ಗ್ರಫೀ & ವಿಡಿಯೋಗ್ರಫಿ ಪ್ಲಾನರ್ & ಬಲೂನ್ ಡೆಕೋರೇಷನ್ ಮಾಡಿಕೊಡಲಾಗುವುದು.
2ನೇ ಕ್ರಾಸ್, ವಿನಾಯಕ ನಗರ, ರಿಂಗ್ ರೋಡ್, ಸಂಗೊಳ್ಳಿ ರಾಯಣ್ಣ ವೃತ್ತದ ಹತ್ತಿರ, ದಾವಣಗೆರೆ.
95356 10454, 84316 07994

**ಪ್ರವೇಶ ಪ್ರಾರಂಭ 2023-24**
ಸಂಪರ್ಕಿಸಿ : ಸಿಂಚನ ಕಾಲೇಜ್
ರಾಂ & ಕೋ ಸರ್ಕಲ್, ದಾವಣಗೆರೆ.
ಮೊ : 88614 45913

**ಸೈಟು ಮಾರಾಟಕ್ಕಿದೆ**
ಅನ್ನಪೂರ್ಣ ಎನ್‌ಕ್ಲೇವ್
30x40 ಉತ್ತರ, 30x50 ಪೂರ್ವ. (Rs. 1499)
70196 18397

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ - 11,000
99161 43003

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED FOR RECEPTIONIST**
Age 21 - 27,
Address : Hairpoint Unisex salon
2nd Floor, No 2988-2A,2B. 7th Main, 3rd Cross Rd, MCC 'B' Block, Davanagere. Karnataka 577004.
Contact no.
97386 64400, 91483 19342

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು, 1. ಕ್ಯಾಷಿಯರ್ 2. ಕ್ಯಾಪ್ಟನ್ ಹಾಗೂ ಸ್ಟೀವರ್ಡ್ (ವೇಟರ್ಸ್) ಕೆಲಸಗಾರರು ಬೇಕಾಗಿದ್ದಾರೆ. ತಮ್ಮ ಬಯೋ ಡೇಟಾದೊಂದಿಗೆ ಸಂಪರ್ಕಿಸಿ.
96060 96695

**SALES GIRL REQUIRED**
1) Sales Experience
2) Computer Handling with basic English Knowledge needed for Innerwear store women's Paradise, AVK College Road,
Contact : 96204 53208

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

# ಸೈಬರ್ ಅಪರಾಧದ ಜಾಗೃತಿ ಅವಶ್ಯ

## ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಮಕ್ಕಳ ವೇಷಭೂಷಣ



ದಾವಣಗೆರೆ, ಫೆ. 10- ನಗರದ ಬೂದಾಳ್ ರಸ್ತೆಯಲ್ಲಿರುವ ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ, ಶಾಲೆಯ ಗೌರವ ಅಧ್ಯಕ್ಷ ಬಿ. ದಾದಾಪೀರ್ ಅಧ್ಯಕ್ಷತೆ ವಹಿಸಿ 74 ನೇ ಗಣರಾಜ್ಯೋತ್ಸವದ ಧ್ವಜಾರೋಹಣ ಮಾಡಿ ವಿದ್ಯಾರ್ಥಿಗಳೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು. ಶಾಲೆಯ ಪ್ರಾಂಶುಪಾಲ ವಾಸಿಮ್ ಪಾಷಾ ಎಂ. ಮಾತನಾಡಿ, ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ಜಾರಿಗೆ ತಂದಿರುವ ಸಂವಿಧಾನದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ರಿಯಾಜ್ ಬಾನು ಮತ್ತು ಶಾಲಾ ಆಡಳಿತ ಅಧಿಕಾರಿ ಆಶ್ಫಕ್ ಅಹಮದ್, ಶಾಲಾ ಸಂಯೋಜಕರಾದ ಶ್ರೀಮತಿ ಶರಫುನ್ನಿಸ, ವಿಭಾಗದ ಮುಖ್ಯಸ್ಥ ಅಲ್ತಾಫ್ ಅಸದಿ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಯಾಸ್ಮಿನ್ ಬಾನು ಹಾಗೂ ಇತರರು ಉಪಸ್ಥಿತರಿದ್ದರು.

## ಪೇಟಿಎಂ ನೇರ ಪಾಲುಗಾರಿಕೆಯಿಂದ ಅಲಿಬಾಬಾ ಹೊರಕ್ಕೆ

ನವದೆಹಲಿ, ಫೆ. 10 - ಪೇಟಿಎಂ ಬ್ರಾಂಡ್ ನಿರ್ವಹಿಸುವ ಓನ್97 ಕಮ್ಯುನಿಕೇಷನ್ಸ್ ಕಂಪನಿಯಲ್ಲಿರುವ ಶೇ.3.16ರ ಪಾಲುಗಾರಿಕೆಯನ್ನು ಚೀನಾದ ಅಲಿಬಾಬಾ ಕಂಪನಿ ಮಾರಿದೆ. ಕಂಪನಿಯಲ್ಲಿ ತಾನು ಹೊಂದಿರುವ ಎಲ್ಲಾ ನೇರ ಪಾಲುಗಾರಿಕೆಯನ್ನು ಅಲಿಬಾಬಾ, 13,600 ಕೋಟಿ ರೂ.ಗಳಿಗೆ ಮಾರಿದೆ ಎಂದು ಮೂಲಗಳು ತಿಳಿಸಿವೆ. ಡಿಸೆಂಬರ್ 2022ರಂದು ಅಲಿಬಾಬಾ ಶೇ.6.26ರ ಪಾಲುಗಾರಿಕೆ ಹೊಂದಿತ್ತು. ಜನವರಿಯಲ್ಲಿ ಶೇ.3.1ರ ಪಾಲುಗಾರಿಕೆ ಮಾರಿತ್ತು. ಉಳಿದಿದ್ದನ್ನು ಶುಕ್ರವಾರ ಮಾರಲಾಗಿದೆ. ಅಲಿಬಾಬಾ ಸಮೂಹದ ಉದ್ಯಮವಾದ ಆಂಟ್ ಫೈನಾನ್ಷಿಯಲ್ ಸಂಸ್ಥೆಯು ಪೇಟಿಎಂನಲ್ಲಿ ಶೇ.25ರ ಪಾಲುಗಾರಿಕೆ ಹೊಂದಿದೆ.



### ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ

ದಾವಣಗೆರೆ, ಫೆ. 10- ಪ್ರಸ್ತುತ ಆರ್ಥಿಕ ಸಾಕ್ಷರತೆ ಮತ್ತು ಸೈಬರ್ ಅಪರಾಧದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಕೇವಲ ಎಸ್ಸೆಸ್ಸೆಲ್ಸಿ ಓದಿದವರಿಂದಲೂ ಸೈಬರ್ ಅಪರಾಧಗಳು ಹೆಚ್ಚಾಗುತ್ತಿವೆ. ವಿದ್ಯಾವಂತರನ್ನೂ ಸಹ ಬಲು ಬೇಗ ಅಪರಾಧಗಳಿಗೆ ಸಿಲುಕಿಸುತ್ತಾರೆ. ಇದರಿಂದ ಜಾಗೃತಿ ವಹಿಸುವುದು ಅಗತ್ಯ ಎಂದು ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಹೇಳಿದರು.

ನಗರದ ಜಯದೇವ ವೃತ್ತದಲ್ಲಿ ಕರ್ನಾಟಕ ಬ್ಯಾಂಕ್ ಪಿ.ಬಿ. ರಸ್ತೆ ಶಾಖೆ ವತಿಯಿಂದ 'ಆರ್ಥಿಕ ಸಾಕ್ಷರತೆ ಮತ್ತು ಸೈಬರ್ ಅಪರಾಧದ ಅರಿವು' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸೈಬರ್ ಅಪರಾಧ ಇಡೀ ಜಗತ್ತೇ ಕಾಡುವ ಸಮಸ್ಯೆಯಾಗಿ ಪರಿಣಮಿಸಿದೆ.ವಿದ್ಯಾವಂತರೇ ಹೆಚ್ಚು ಸೈಬರ್ ಅಪರಾಧದ ವಂಚನೆಗೆ ಒಳಗಾಗಿದ್ದಾರೆ. ಅಂತರ್ಜಾಲದ ಮೂಲಕ ವಂಚಿಸುವವರು ಸಹ ಹೆಚ್ಚಾಗಿದ್ದು, ಕೇವಲ ಎಸ್ಸೆಸ್ಸೆಲ್ಸಿ ಓದಿದವರು ಸೈಬರ್ ಅಪರಾಧ ಕೃತ್ಯಕ್ಕೆ ಬಲಿಯಾಗುತ್ತಿದ್ದಾರೆ. ಸೈಬರ್ ಬಗ್ಗೆ ಅರಿವು ಅತ್ಯಗತ್ಯ ಎಂದರು.

ಕರ್ನಾಟಕ ಬ್ಯಾಂಕ್ ಅಧಿಕಾರಿ ಸಂಜೀವಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ತಂತ್ರಾಂಶ ಬಳಕೆ ಹೆಚ್ಚಾಗುತ್ತಿದ್ದು, ಮೊಬೈಲ್ ನೆಟ್ ಬ್ಯಾಂಕಿಂಗ್, ಇಂಟರ್ ನೆಟ್ ಬ್ಯಾಂಕಿಂಗ್ ಬಗ್ಗೆ ತಂತ್ರಾಂಶವನ್ನು ಅಳವಡಿಸಲಾಗಿದ್ದು, ತಂತ್ರಾಂಶದ ಬಗ್ಗೆ ಸರಿಯಾದ ಜ್ಞಾನವಿಲ್ಲದಿದ್ದರೆ ವಂಚನೆಗೆ ಒಳಗಾಗುವ ಸಾಧ್ಯತೆಗಳಿವೆ. ತಂತ್ರಾಂಶದ ಜ್ಞಾನ ಹೊಂದುವುದು ಮುಖ್ಯ ಎಂದು ಹೇಳಿದರು.

ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಬಿ.ವಿ. ಹಯವದನ ಉಪಾಧ್ಯಾಯ ಮಾತನಾಡಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ಗ್ರಾಹಕರ ಜಾಗೃತಿ ಅಭಿಯಾನದಡಿ ಆರ್ಥಿಕ ಸಾಕ್ಷರತೆ ಮತ್ತು ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಕರ್ನಾಟಕ ಬ್ಯಾಂಕಿನಿಂದಲೂ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಬ್ಯಾಂಕಿನ ಲಾಭಾಂಶದಲ್ಲಿ ಶೇ. 2 ರಷ್ಟು ಹಣವನ್ನು ಸಮಾಜ ಸೇವಾ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತಿದೆ ಎಂದರು.

ಎಸ್.ವಿ. ಜಯಂತಕುಮಾರ್, ಜಿ.ಎಸ್. ಗಣೇಶ ಕುಮಾರ್, ನಾಗಭೂಷಣ ಭಟ್, ರಾಘವೇಂದ್ರ ನಾಯಕ್ ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

## 25 ಕೋಟಿ ಮೌಲ್ಯದ ಸರ್ಕಾರಿ ಜಾಗ ಕಂಡವರ ಪಾಲು

ದಾವಣಗೆರೆ, ಫೆ.10- ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಶಿರಮಗೊಂಡನಹಳ್ಳಿ ರಿ.ಸ.ನಂ.57 ಹಾಗೂ 62ರ ಪ್ರದೇಶದಲ್ಲಿನ 8 ಎಕರೆ 16 ಗುಂಟೆಯ ಸುಮಾರು 25 ಕೋಟಿ ರೂ. ಮೌಲ್ಯದ ಸರ್ಕಾರಿ ಸ್ವತ್ತು ಕಂಡವರ ಪಾಲಾಗುತ್ತಿದೆ ಎಂದು ಸಾಮಾಜಿಕ ಕಾರ್ಯಕರ್ತ ಹರೀಶ್ ಹೆಚ್.ಆರ್. ಆರೋಪಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸರ್ಕಾರಿ ಜಾಗವನ್ನು ಮುಂದಿನ ಏಳು ದಿನಗಳಲ್ಲಿ ಬಂದೋಬಸ್ತ್ ಮಾಡದೇ ಇದ್ದರೆ ಪಾಲಿಕೆ ಆಯುಕ್ತರ ಮೇಲೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕ ದ್ದಮೆ ಹೂಡುವುದಾಗಿ ಹೇಳಿದರು.

ಶಿರಮಗೊಂಡನಹಳ್ಳಿ ರಿ.ಸ.ನಂ.57 ಹಾಗೂ 62ರ ಪ್ರದೇಶಕ್ಕೆ 1977ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರಲ್ಲಿ ಹಾಗೂ ದಾವಣಗೆರೆ- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಂತಿಮ ಅನುಮೋದಿತ ವಿನ್ಯಾಸ ನಕ್ಷೆ ಸಿದ್ಧಪಡಿಸಲಾಗಿದೆ. ಇಂದಿನವರೆಗೂ ಈ ವಿನ್ಯಾಸವನ್ನು ಯಾವುದೇ ರೀತಿ ಮಾರ್ಪಡಿಸಿಲ್ಲ.

ಆದರೆ ಅನುಮೋದಿತ ನಕ್ಷೆಯಲ್ಲಿ ಸಿದ್ಧಪಡಿಸಿರುವ 238 ಸೈಟುಗಳನ್ನು ಹೊರತುಪಡಿಸಿ, ಪಂಚಾಯ್ತಿಯ ಜಾಗ, ಶಾಪಿಂಗ್ ಕಾಂಪ್ಲೆಕ್ಸ್ ಜಾಗ, ಬ್ಯಾಂಕ್ ಜಾಗ, ಕೋ ಆಪರೇಟಿವ್ ಸೊಸೈಟಿ ಜಾಗ, ಪ್ಲೇ ಗ್ರೌಂಡ್, ಪಾರ್ಕ್, ಕಮ್ಯೂನಿಟಿ ಹಾಲ್, ಸರ್ವೀಸ್ ಇಂಡಸ್ಟ್ರೀ ಜಾಗವನ್ನು ಹೆಚ್ಚುವರಿಯಾಗಿ 280 ಸೈಟ್‌ಗಳನ್ನಾಗಿ ಮಾಡಿ ಹಲವರ ಹೆಸರಿಗೆ ಖಾತೆ ಮಾಡಲಾಗಿದೆ ಎಂದು ಆರೋಪಿಸಿದರು.

ಕಂದಾಯ ಅಧಿಕಾರಿಗಳನ್ನು ಕೇಳಿದರೆ 'ದೊಡ್ಡವರು ಹೇಳಿದಂತೆ ಮಾಡಿದ್ದೇವೆ' ಎನ್ನುತ್ತಿದ್ದಾರೆ. ದೊಡ್ಡವರು ಯಾರೆಂದು ತಿಳಿಯಬೇಕಿದೆ ಎಂದು ಹೇಳಿದರು. ಕೂಡಲೇ ಎಲ್ಲಾ ಖಾತೆಗಳನ್ನು ರದ್ದುಗೊಳಿಸಬೇಕು. ಇಲ್ಲದಿದ್ದರೆ ಆಯುಕ್ತರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸುವುದಾಗಿ ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ವೀರಾಚಾರ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದಿನಿಂದ ಗೀತಾ ಜ್ಞಾನೇಶ್ವರಿ ಗ್ರಂಥ ಸಾಮೂಹಿಕ ಪಾರಾಯಣ

ಮಹಾರಾಜಪೇಟೆಯ ವಿಠಲ ಮಂದಿರದ ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ ವತಿಯಿಂದ ಮಹಾಶಿವರಾತ್ರಿ ಹಾಗೂ ಶ್ರೀ ವಿಠಲ ರುಖುಮಾಯಿ ದೇವರ 45 ನೇ ವರ್ಷದ ಪ್ರತಿಷ್ಠಾಪನೆ ದಿವಸ ಭಜನಾ ಮಂಡಳಿಯವರಿಂದ ಧಾರ್ಮಿಕ ಕಾರ್ಯಕ್ರಮಗಳು ಇಂದಿನಿಂದ ಇದೇ ದಿನಾಂಕ 19 ರವರೆಗೆ ಬೆಳಿಗ್ಗೆ 5ಕ್ಕೆ ಕಾಕಡಾರತಿ, ಭಜನೆ, 7 ರಿಂದ 9.30 ರವರೆಗೆ ಶ್ರೀ ಗೀತಾ ಜ್ಞಾನೇಶ್ವರಿ ಗ್ರಂಥ ಸಾಮೂಹಿಕ ಪಾರಾಯಣ ನಡೆಯಲಿದೆ.

## ಇಂದು ಗುರುಕುಲ ಶಾಲೆ ವಾರ್ಷಿಕೋತ್ಸವ

ಗುರುಕುಲ ವಸತಿಯುತ ಶಾಲೆಯ ಗುರುಕುಲ ವೈಭವ ವಾರ್ಷಿಕ ಕಾರ್ಯಕ್ರಮವು ಇಂದು ಸಂಜೆ 4 ಗಂಟೆಗೆ ಶಿವಯೋಗಾಶ್ರಮದಲ್ಲಿ ಜರುಗಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ, ಶಾಮನೂರು ಶಿವಶಂಕರಪ್ಪ, ಶಿವಾನಂದ ಕಾಪಶಿ, ರಿಷ್ಯಂತ್, ಜಿ.ಆರ್. ತಿಪ್ಪೇಶಪ್ಪ, ದಾರುಕೇಶ್, ಆರ್. ಅಬ್ದುಲ್, ಆರ್.ಎಸ್. ರಾಜು, ಕೆ.ಜಿ. ಯಲ್ಲಪ್ಪ, ರಾಮೇಗೌಡ, ಜ್ಞಾನೇಶ್ವರ ಜವಳಿ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಫೆ. 10- ನಗರದ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ನಾಡಿದ್ದು ದಿನಾಂಕ 13 ಮತ್ತು 14 ರಂದು ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ :08192-233787.

## ಜಿಲ್ಲೆಯಲ್ಲಿ ಇಂದು ಲೋಕ್ ಅದಾಲತ್

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಇಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಅಮೃತಕಾಲ ಬಜೆಟ್ ಅವಲೋಕನ ಸಭೆ

ದಾವಣಗೆರೆ, ಫೆ.10- ಕೇಂದ್ರದ ಅಮೃತ ಕಾಲ ಬಜೆಟ್-ಅವಲೋಕನ ಸಭೆಯನ್ನು ಚನ್ನಗಿರಿ ಕೇಶಮೂರ್ತಿ ರೋಟರಿ ಭವನದಲ್ಲಿ ನಾಳೆ ದಿನಾಂಕ 11ರ ಶನಿವಾರ ಸಂಜೆ 5.45ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಎಸ್.ಎಂ. ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ರಾಜ್ಯ ಪ್ರಕೋಷ್ಠಗಳ ಸಹ ಸಂಯೋಜಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ ಸಭೆ ಉದ್ಘಾಟಿಸಲಿದ್ದಾರೆ.

ಆರ್ಥಿಕ ತಜ್ಞ, ಆರ್ಥಿಕ ಪ್ರಕೋಷ್ಠ ರಾಜ್ಯ ಸಂಚಾಲಕ ಸಮೀರ್ ಕಾಗಲಕರ್ ಮುಖ್ಯ ವಕ್ತಾರರಾಗಿ ಆಗಮಿಸಲಿದ್ದಾರೆ. ಲೆಕ್ಕ ಪರಿಶೋಧಕ ಉಮೇಶ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ ಎಂದು ಹೇಳಿದರು.

**ಬಜೆಟ್ ಕರ್ನಾಟಕಕ್ಕೆ ದೊಡ್ಡ ಕೊಡುಗೆ:** ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮ್ ಅವರು ಮಂಡಿಸಿರುವ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಸಿಂಹ ಪಾಲು ದೊರೆತಂತಾಗಿದೆ ಎಂದು ಹನಗವಾಡಿ ವೀರೇಶ್ ಹೇಳಿದರು. ಭದ್ರಾ ಮೇಲ್ದಂಡೆ ಯೋಜನೆಗೆ 5.300 ಕೋಟಿ ರೂ. ಅನುದಾನ ಬಂದಿರುವುರು ವಿಪಕ್ಷಗಳಿಗೆ ನಿರಾಸೆ ಉಂಟು ಮಾಡಿ, ಯೋಜನೆ ಬಗ್ಗೆ ಅಪ ಪ್ರಚಾರ ಮಾಡುತ್ತಿವೆ ಎಂದು ಹೇಳಿದರು. ಚುನಾವಣೆ ಇದ್ದರೂ ಇದು ಚುನಾವಣಾ ಬಜೆಟ್ ಅಲ್ಲ. ಇದು ಅಮೃತ ಕಾಲದ ಬಜೆಟ್ ಆಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ಡಿ.ಎಸ್ ಶಿವಶಂಕರ್, ಶಿವರಾಜ್ ಪಾಟೀಲ್, ಜಿ.ಮಂಜಾನಾಯ್ಕ ಉಪಸ್ಥಿತರಿದ್ದರು.

## ವಿಜ್ಞಾನ ಎಂಬುದು ಸುವ್ಯವಸ್ಥಿತ ಜ್ಞಾನ

### ವಿಜಯನಗರ ಜಿಲ್ಲಾ ಪ್ರಾ. ಶಿ. ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್



**ಹರಪನಹಳ್ಳಿ**

ಹರಪನಹಳ್ಳಿ, ಫೆ.10. ವಿಜ್ಞಾನ ಎಂಬುದು ಸುವ್ಯವಸ್ಥಿತವಾದ ಜ್ಞಾನ ಎಂದು ವಿಜಯನಗರ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್ ಹೇಳಿದರು.

ಪಟ್ಟಣದ ಮಾದರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ ವೀಕ್ಷಿಸಿ ಮಾತನಾಡಿದರು.

ಮಕ್ಕಳು ತಾವೇ ತಯಾರಿಸಿದ ಪ್ರಯೋಗ ಹಾಗೂ ವಿಜ್ಞಾನ ವಸ್ತು ಪ್ರದರ್ಶನವನ್ನು ಏರ್ಪಡಿಸುವುದು ಕಲಿಕೆಯ ಸ್ಥಿರೀಕರಣವನ್ನು ಮಾಡಲು ಸಹಕಾರಿಯಾಗಿದೆ ವಿದ್ಯಾರ್ಥಿನಿಯರು ವಿಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುವುದರ ಜೊತೆಗೆ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಜ್ಞಾನ ಶಿಕ್ಷಕಿ ಜಿ.ಗೌರೇಶ್ವರಿ ಇವರ ನೇತೃತ್ವದಲ್ಲಿ ಮಕ್ಕಳು ಮಾನವನ ಹೃದಯದ ಮಾದರಿ, ವಿಸರ್ಜನಾಂಗ ವ್ಯೂಹ, ಜೀವಕೋಶಗಳು ನಿಮ್ನ ಹಾಗೂ ಪೀನ ಮಸೂರದಲ್ಲಿ ಉಂಟಾಗುವ ಪ್ರತಿಬಿಂಬಗಳು ಹಗಲು ಮತ್ತು ರಾತ್ರಿ ಉಂಟಾಗುವಿಕೆ, ಗ್ರಹಣಗಳು, ಗ್ರಹಣಗಳಿಗೆ ಕಾರಣಗಳು, ವಾಯು ಮತ್ತು ಜಲ ಮಾಲಿನ್ಯ ಆಮ್ಲ, ಪ್ರತ್ಯಾಮ್ಲ ಮತ್ತು ಲವಣಗಳನ್ನು ಗುರುತಿಸುವಿಕೆ ರಾಸಾಯನಿಕ ಬಲಾವಣೆ ಮುಂತಾದ ವಿಜ್ಞಾನ ವಸ್ತು ಪ್ರದರ್ಶನವನ್ನು ಮಕ್ಕಳು ಸ್ವತಃ ತಯಾರಿಸಿ ಪ್ರದರ್ಶಿಸಿದರು.

ಪ್ರಭಾರಿ ಮುಖ್ಯ ಗುರುಗಳಾದ ರೇಣುಕಮ್ಮ, ಶಿಕ್ಷಕರಾದ ನಿರ್ಮಲ ಕುಮಾರಿ, ಗೀತಾಬಾಯಿ, ಲೀಲಾವತಿ, ಉಮಾದೇವಿ, ಜಿ.ಎಸ್ ಸುರೇಶ್, ಕೆ.ನಾಗರಾಜ್ ಉಪಸ್ಥಿತರಿದ್ದರು.

## ರಾಣೇಬೆನ್ನೂರು : ಇಂದು ರಾಜ್ಯಮಟ್ಟದ ಭಜನಾ ಸ್ಪರ್ಧೆ

ಕಾಕಿ ಜನ ಸೇವಾ ಸಂಸ್ಥೆ, ಕುರುಹಿನಶೆಟ್ಟಿ ಸಮಾಜ ಸೇವಾ ಸಂಘ, ಜೆಸಿಐ, ರಾಣೇಬೆನ್ನೂರು ಜೇಸಿಸ್ ಕ್ಷೇಮಾಭಿವೃದ್ಧಿ ಕ್ರೆಡಿಟ್ ಕೋ-ಆಪರೇಟೀವ್ ಸೊಸೈಟಿ ಮತ್ತು ಸೌರಭ ಜಾನಪದ ಕಲಾ ವೇದಿಕೆ ಸಂಯುಕ್ತಾಶ್ರಯದಲ್ಲಿ ದಿ. ದೊಡ್ಡ ನಾಗಪ್ಪ ಕಾಕಿ ಹಾಗೂ ದಿ. ಸಣ್ಣ ನಾಗಪ್ಪ ಕಾಕಿ ಇವರ ಸ್ಮರಣಾರ್ಥ ಇಂದು ರಾಜ್ಯಮಟ್ಟದ ಭಜನಾ ಸ್ಪರ್ಧೆಯನ್ನು ನೀಲಕಂಠೇಶ್ವರ ದೇವಸ್ಥಾನ ಆವರಣದ ಗಣೇಶೋತ್ಸವ ಮಂಟಪದಲ್ಲಿ ಏರ್ಪಡಿಸಲಾಗಿದೆ.

ವಿಜೇತರಿಗೆ ಪ್ರಥಮ 25 ಸಾವಿರ, ದ್ವಿತೀಯ 20 ಸಾವಿರ, ತೃತೀಯ 15 ಸಾವಿರ, ಚತುರ್ಥ 10 ಸಾವಿರ ನಗದು ಸೇರಿದಂತೆ ಆಕರ್ಷಕ ಪಾರಿತೋಷಕ, ಪ್ರಮಾಣ ಪತ್ರ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸಿ : 94499-73158, 9242881170, 9844997082.

## ನಗರದಲ್ಲಿ ಇಂದು 'ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ, ತರಳಬಾಳು ಬಡಾವಣೆ ಹಾಗೂ ಸಾದರ ನೌಕರರ ಬಳಗ ಇವರ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 6.30 ಕ್ಕೆ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ 'ಶಿವಗೋಷ್ಠಿ-292, ಸ್ಮರಣೆ- 64' ಕಾರ್ಯಕ್ರಮ ನಡೆಯಲಿದೆ.

ಮಾಗನೂರು ಬಸಪ್ಪ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಅಧ್ಯಕ್ಷತೆ ವಹಿಸುವರು. ಉಪನ್ಯಾಸಕಿ ಸುಮತಿ ಜಯ್ಯಪ್ಪ ಅವರು 'ಅಂಬಿಗರ ಚೌಡಯ್ಯನವರ ವಚನಗಳು' ಕುರಿತು ಮಾತನಾಡಲಿದ್ದಾರೆ.

ಲಿಂ. ವೈ.ಬಿ. ರುದ್ರಪ್ಪ ಅವರ ಸ್ಮರಣೆಯನ್ನು ಉಪನ್ಯಾಸಕ ಎಂ.ಆರ್. ಶಿವಕುಮಾರ್ ಮಾಡಲಿದ್ದಾರೆ. ಕದಳಿ ಮಹಿಳಾ ವೇದಿಕೆಯವರಿಂದ ವಚನ ಗಾಯನ ಕಾರ್ಯಕ್ರಮ ನಡೆಯಲಿದೆ.

## ನಗರದ ಸಿದ್ಧಿವಿನಾಯಕ ಶಾಲೆಯಲ್ಲಿ ಇಂದು

ವಿನೋಬನಗರದ ಶ್ರೀ ಸಿದ್ಧಿವಿನಾಯಕ ಸಾಂಸ್ಕೃತಿಕ ಸಂಘದಿಂದ ಶ್ರೀಮತಿ ಪಾರ್ವತಮ್ಮ ರೇವಣಸಿದ್ದಪ್ಪ ನರ್ಸರಿ ಶಾಲೆ, ಶ್ರೀ ಯಜಮಾನ್ ಬೆಳ್ಳೂಡಿ ಕರಿಶೆಟ್ಟಪ್ಪ ಬಸಮ್ಮ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಯಜಮಾನ್ ಬೆಳ್ಳೂಡಿ ಸೋಮಶೇಖರಪ್ಪ ಗೌರಮ್ಮ ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ಇಂದು ಮತ್ತು ನಾಳೆ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಸಂಜೆ 6 ಗಂಟೆಗೆ ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಜರುಗಲಿದ್ದು, ಮುಖ್ಯಅ ತಿಥಿಯಾಗಿ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ವಿಧಾನ ಪರಿಷತ್ ಮುಖ್ಯ ಸಚೇತಕ ವೈ.ಎ. ನಾರಾಯಣ ಸ್ವಾಮಿ ಅವರಿಗೆ ಸನ್ಮಾನಿಸಲಾಗುವುದು. ನಾಳೆ ಶನಿವಾರ ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

## ಇಂದು 'ಹೆಜ್ಜೆಯ ಗುರುತು' ಕವನ ಸಂಕಲನ, 'ಸಮಕಾಲೀನ ವಚನಧಾರೆ' ಕೃತಿ ಬಿಡುಗಡೆ

ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಶಾಖೆ, ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ಹಾಗೂ ಮಿಂಚು ಪ್ರಕಾಶನ ಇವರ ಸಂಯುಕ್ತಾಶ್ರಯದಲ್ಲಿ ಎಂ.ಎಸ್. ಮಂಜುಳಾ ಮಂಜಪ್ಪ ವಿರಚಿತ 'ಹೆಜ್ಜೆಯ ಗುರುತು' ಕವನ ಸಂಕಲನ ಹಾಗೂ 'ಸಮಕಾಲೀನ ವಚನಧಾರೆ' ನವ್ಯ ವಚನ ಸಂಕಲನ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವು ಫೆ.11ರ ಇಂದು ಬೆಳಿಗ್ಗೆ 11 ಗಂಟೆಗೆ ಮಾಗನೂರು ಬಸಪ್ಪ ಶಾಲೆಯಲ್ಲಿ ನಡೆಯಲಿದೆ.

ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಅವರ ಅಧ್ಯಕ್ಷತೆಯಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಸಾಹಿತಿ ಡಾ. ಬಸವರಾಜ ನೆಲ್ಲಿಸರ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ವಿಮರ್ಶಕ ಡಾ. ನಾ. ಲೋಕೇಶ್ ಒಡೆಯರ್ ಮತ್ತು ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಮಲ್ಲಮ್ಮ ನಾಗರಾಜ್ ಆಶಯ ನುಡಿಗಳನ್ನಾಡುವರು. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಸಚಿವ ಡಾ. ಬಿ.ಇ. ರಂಗಸ್ವಾಮಿ ಅವರಿಗೆ ಇದೇ ವೇಳೆ ಸನ್ಮಾನಿಸಲಾಗುವುದು.

## ನಗರದಲ್ಲಿ ಇಂದು ಕರಾಪ್ರೌಸಸಂ ಪದಾಧಿಕಾರಿಗಳ ಸೇವಾ ಸ್ವೀಕಾರ

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳ ಸೇವಾ ಸ್ವೀಕಾರ ಕಾರ್ಯಕ್ರಮವನ್ನು ಇಂದು ನಗರದ ಜಿಲ್ಲಾ ಗುರುಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಸರ್ಕಾರದ ಮುಖ್ಯ ಸಚೇತಕ ಡಾ. ವೈ.ಎ. ನಾರಾಯಣಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಬಿ. ಮುಬಾರಕ್ ಅಲಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಮುಖ್ಯಅತಿಥಿಗಳಾಗಿ ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ, ಡಯಟ್ ಉಪ ನಿರ್ದೇಶಕರಾದ ಗೀತಾ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಟಿ. ಅಂಬಣ್ಣ, ದಾರುಕೇಶ್, ಸಂಘದ ರಾಜ್ಯಾಧ್ಯಕ್ಷ ಬಿ. ಸಿದ್ದಬಸಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಮು ಅ. ಗುಗುವಾಡ, ರಾಜ್ಯ ಉಪಾಧ್ಯಕ್ಷ ಮಲ್ಲನಗೌಡ ಕಾ. ಬಿರಾದಾರ ಮತ್ತಿತರರು ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ಚೇತನ ಸಿರಿ

ಎಸ್.ಎಸ್.ಜಿ.ಎಂ ಶಿಕ್ಷಣ ಮತ್ತು ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಎಸ್‌ಎಸ್‌ಎಂ ವಸತಿ ಪಬ್ಲಿಕ್ (ಸಿಬಿಎಸ್‌ಇ) ಶಾಲೆಯಲ್ಲಿ ಚೇತನ ಸಿರಿ- 2023 ವಾರ್ಷಿಕ ದಿನಾಚರಣೆ ಕಾರ್ಯಕ್ರಮವನ್ನು ಇಂದು ಸಂಜೆ 4.30 ಕ್ಕೆ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಯಮ್ಮ ಗೋಪಿನಾಯ್ಕ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸರ್ಕಾರದ ಮುಖ್ಯ ಸಚೇತಕ ಡಾ. ವೈ.ಎ ನಾರಾಯಣ ಸ್ವಾಮಿ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ಎಸ್‌ಎಸ್‌ಎಂಡಿ ಶೈಕ್ಷಣಿಕ ಮತ್ತು ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಕೆ. ಮಂಜಾನಾಯ್ಕ್ ಅಧ್ಯಕ್ಷತೆ ವಹಿಸಲಿದ್ದು, ಎಸ್. ಮಂಜುನಾಥ, ಶಿಲ್ಪಾ ಜಯಪ್ರಕಾಶ್, ಬಿ.ಎನ್. ಮಲ್ಲೇಶ್, ಡಿ.ಎಂ. ರಾಥೋಡ್, ಬಿ.ಎಂ. ದಾರುಕೇಶ್, ಜಿ.ಹಾಲೇಶಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಸಂವಿಧಾನದ ಆಶಯಗಳ ಪರಿಪಾಲನೆ ಮುಖ್ಯ



### ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ.ರಾಘವೇಂದ್ರ ನಾಯರಿ

ದಾವಣಗೆರೆ, ಫೆ. 10- ಜಗತ್ತಿಗೆ ಮಾದರಿಯಾದ ಸಂವಿಧಾನವನ್ನು ನಮ್ಮ ದೇಶ ಹೊಂದಿದೆ. ಆದರೆ ಪ್ರಜಾಪ್ರಭುತ್ವವಾದಿ ರಾಷ್ಟ್ರವೊಂದರ ಸಂವಿಧಾನದ ಸದಾಶಯಗಳನ್ನು ನಾವು ಎಷ್ಟರ ಮಟ್ಟಿಗೆ ಪರಿಪಾಲಿಸುತ್ತಿದ್ದೇವೆ ಎಂಬ ಆತ್ಮಾವಲೋಕನ ಆಗಬೇಕಾಗಿದೆ. ಸಮಾಜಕ್ಕೆ ದಾರಿದೀಪದಂತೆ ಇರಬೇಕಾದ ಇದು ರಾಜಕಾರಣಿಗಳಿಗೂ, ಅಧಿಕಾರಿಶಾಹಿ ವರ್ಗಕ್ಕೂ ಇದು ಅನ್ವಯಿಸುತ್ತದೆ. ರಾಜಕಾರಣಿಗಳ ಮಿತಿ ಮೀರಿದ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಸ್ವೇಚ್ಛಾವರ್ತನೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಣುಕಿಸುವಂತಿವೆ ಎಂದು ಎಐಟಿಯುಸಿ ದಾವಣಗೆರೆ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ವಿಷಾದ ವ್ಯಕ್ತಪಡಿಸಿದರು.

ನಗರದ ಕಾಂ. ಪಂಪಾಪತಿ ಭವನದಲ್ಲಿ ಎಐಟಿಯುಸಿ ಜಿಲ್ಲಾ ಸಮಿತಿ ಹಮ್ಮಿಕೊಂಡಿದ್ದ 74 ನೇ ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು..

ಡಾ.ಬಿ.ಆರ್.ಅಂಬೇಡ್ಕರ್ ನೇತೃತ್ವದಲ್ಲಿ ರಚನೆಯಾದ ನಮ್ಮ ಸಂವಿಧಾನವು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ರಚನೆ ಯಾಗಿದೆ. ಆದರೆ ಅದನ್ನು ಜನರಿಗೆ ತಲುಪಿಸುವಲ್ಲಿ ಆಡಳಿತದ ಚುಕ್ಕಾಣಿ ಹಿಡಿದವರು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಆಗ ಮಾತ್ರ ಗಣತಂತ್ರದ ನಿಜವಾದ ಆಶಯ ಈಡೇರಲು ಸಾಧ್ಯ ಎಂದು ನಾಯರಿ ಅಭಿಪ್ರಾಯಪಟ್ಟರು.

ರಾಷ್ಟ್ರ ಧ್ವಜವನ್ನು ಅನಾವರಣಗೊಳಿಸಿ ಮಾತನಾಡಿದ ಹಿರಿಯ ಕಾರ್ಮಿಕ ನಾಯಕ ಹಾಗೂ ಎಐಟಿಯುಸಿ ಜಿಲ್ಲಾ ಖಜಾಂಚಿ ಆನಂದರಾಜ್, ಗಣರಾಜ್ಯೋತ್ಸವದ ಈ ಐತಿಹಾಸಿಕ ದಿನದಂದು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮತ್ತು ಸರ್ವರಿಗೂ ಸಮಾನತೆ, ಶಿಕ್ಷಣ, ಆರೋಗ್ಯ ಹಾಗೂ ಇತರೆ ಮೂಲಭೂತ ಹಕ್ಕುಗಳನ್ನು ನೀಡಿರುವ ಸಂವಿಧಾನವನ್ನು ಜಾರಿಗೆ ತರಲು ಶ್ರಮಿಸಿದ ಎಲ್ಲಾ ಮಹಾನ್ ವ್ಯಕ್ತಿಗಳಿಗೆ ಗೌರವ ಸಲ್ಲಿಸುವುದು ಕರ್ತವ್ಯವಾಗಿದೆ ಎಂದರು.


ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಎಐಟಿಯುಸಿ ಹರಿಹರ ತಾಲ್ಲೂಕು ಅಧ್ಯಕ್ಷ ಹೆಚ್. ಕೆ.ಕೊಟ್ರಪ್ಪ ಮಾತನಾಡಿ, ಭಾರತ ದೇಶದಲ್ಲಿ ಸಂವಿಧಾನ ಜಾರಿಗೆ ಬಂದ ಮೇಲೆಯೇ ಈ ದೇಶದ ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕುಗಳಾದ ಸಮಾನತೆ, ಸ್ವಾತಂತ್ರ್ಯ, ಧರ್ಮ, ಸಂಸ್ಕೃತಿ, ಶಿಕ್ಷಣ ಮತ್ತು ಇತರೆ ಹಕ್ಕುಗಳು ಸಿಕ್ಕಿರುವುದು. ಬಿಡಿ ಬಿಡಿಯಾಗಿ ಇರದೇ ಒಗ್ಗಟ್ಟಾಗಿ ದೇಶದ ಏಕತೆ ಮತ್ತು ಸಮಗ್ರತೆಯನ್ನು ಸಾಧಿಸಬೇಕೆಂಬುದೇ ಗಣರಾಜ್ಯೋತ್ಸವದ ಆಶಯವಾಗಿದೆ. ಇಂದು ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎನ್ನುವ ಹೆಗ್ಗಳಿಕೆಗೆ ನಮ್ಮ ಭಾರತ ದೇಶ ಪಾತ್ರವಾಗಿದೆ ಎಂದು ಹೇಳಿದರು.

ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಉಮೇಶ್ ಆವರಗೆರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಆವರಗೆರೆ ವಾಸು ಸ್ವಾಗತಿಸಿದರು. ಅಂಗನವಾಡಿ ಫೆಡರೇಷನ್‌ನ ಜಿಲ್ಲಾ ಅಧ್ಯಕ್ಷೆ ಎಂ.ಬಿ.ಶಾರದಮ್ಮ ವಂದಿಸಿದರು.

ಕಾರ್ಯಕ್ರಮದಲ್ಲಿ ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ವಿ.ಲಕ್ಷ್ಮಣ್, ದಾವಣಗೆರೆ ತಾಲೂಕು ಅಧ್ಯಕ್ಷ ನರೇಗಾ ರಂಗನಾಥ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಶೆಟ್ಟರ್, ಚನ್ನಗಿರಿ ತಾಲ್ಲೂಕು ಅಧ್ಯಕ್ಷ ಜೈನುಲ್ಲಾ ಖಾನ್, ಜಗಳೂರು ತಾಲ್ಲೂಕು ಅಧ್ಯಕ್ಷ ಮಹಮದ್ ಬಾಷಾ ಹಾಗೂ ಇತರೆ ಮುಖಂಡರುಗಳಾದ ಮಹಮದ್ ರಫೀಕ್, ಇಪ್ಟಾ ಕಲಾವಿದ ಐರಣಿ ಚಂದ್ರು, ಸಿ.ರಮೇಶ್, ರುದ್ರಮ್ಮ, ಕಾಳಮ್ಮ, ಸುರೇಶ್, ಯರಗುಂಟೆ ಸುರೇಶ್, ಉಮಾಪತಿ ಮತ್ತಿತರರು ಉಪಸ್ಥಿತರಿದ್ದರು.

## ವಿವೇಕಾನಂದರ ಚಿಂತನೆಗಳು ಯುವಕರಿಗೆ ಆದರ್ಶ

### ಭದ್ರಾ ಕಾಲೇಜು ವಾರ್ಷಿಕೋತ್ಸವದಲ್ಲಿ ಪ್ರಾಂಶುಪಾಲ ಡಾ. ಎಂ. ಸೋಮಶೇಖರಪ್ಪ



ದಾವಣಗೆರೆ,ಫೆ.10- ಸ್ವಾಮಿ ವಿವೇಕಾನಂದರ ಸಮೃದ್ಧ ಚಿಂತನೆ ಮತ್ತು ಅವರು ಸಮಾಜ ಸುಧಾರಣೆಗೆ ಶ್ರಮಿಸಿದ ರೀತಿ ಇಂದಿನ ಯುವ ಜನರಿಗೆ ಆದರ್ಶವಾಗಬೇಕು ಎಂದು ಆರ್.ಎಲ್. ಲಾ ಕಾಲೇಜು ಪ್ರಾಂಶುಪಾಲ ಡಾ. ಎಂ ಸೋಮಶೇಖರಪ್ಪ ತಿಳಿಸಿದರು.

ನಗರದ ಭದ್ರಾ ಪಿಯು ಕಾಲೇಜಿನ 2022-23ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ ಸಮಾರಂಭ ಹಾಗೂ ಎಂ.ಕಾಂ ಬ್ಯಾಂಕ್ ವಿಜೇತರಿಗೆ ಸನ್ಮಾನ ಕಾರ್ಯಕ್ರಮವನ್ನು ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸಿಂಹದ ಮರಿಗಳಂತೆ ದಕ್ಷತೆ, ಚಾಕಚಕ್ಯತೆಯಿಂದ ತಮ್ಮ ಜೀವನವನ್ನು ಹಾಗೂ ಅದರೊಟ್ಟಿಗೆ ಸಮಾಜವನ್ನು ಮುನ್ನಡೆಸಬೇಕೆಂದು ಕಿವಿಮಾತನ್ನು ಹೇಳಿದ ಅವರು ಇಂದಿನ ಯುವ ಜನಾಂಗ ಕೇವಲ ಮೊಬೈಲ್ ಬಳಕೆಯಲ್ಲಿ ಮಗ್ನರಾಗಿ ಓದುವ ಹವ್ಯಾಸದಿಂದ ದೂರವಾಗಿರುವುದು ದುರಾದೃಷ್ಟಕರ ವಾಗಿದೆ ಎಂದು ವಿಷಾದಿಸಿದರು.

ಸಮಾರಂಭದ ಮತ್ತೋರ್ವ ಅತಿಥಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಎಚ್. ಮಾತನಾಡಿ, ಇಂದಿನ ಯುವ ಜನತೆ ಸಾಮಾಜಿಕ ಆಗು ಹೋಗುಗಳಿಗೆ ಸ್ಪಂದಿಸುತ್ತಿಲ್ಲ. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಪ್ರತಿಭಟನಾ ಮನೋಭಾವದಿಂದ ದೂರಾಗುತ್ತಿದ್ದಾರೆ ಎಂದರು.

ವಿದ್ಯಾಥಿಗಳಿಗೆ ಸಮಕಾಲೀನ ವಿದ್ಯಮಾನಗಳನ್ನು ತಿಳಿದು ಕೊಳ್ಳಲು ದಿನ ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ರೂಢಿಗೊಳಿಸಿಕೊಳ್ಳಲು ಹೇಳಿದರು.


ವಿಶಿಷ್ಟ ಟ್ಯಾಲಿ ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್‌ನ ಅರುಣ್ ಕುಮಾರ್ ವಿದ್ಯಾರ್ಥಿಗಳಿಗೆ ಟ್ಯಾಲಿ ಪ್ರಮಾಣ ಪತ್ರಗಳನ್ನು ವಿತರಿಸಿ, ವೃತ್ತಿನಿರತ ಕೌಶಲ್ಯಗಳನ್ನು ರೂಪಿಸಿಕೊಳ್ಳಲು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ. ಡಿ ಚಂದ್ರಪ್ಪ ಮಾತನಾಡಿ, ವಿದ್ಯಾರ್ಥಿಗಳು ಸತತ ಹಾಗೂ ನಿರಂತರ ಅಧ್ಯಯನ ಶೀಲರಾಗಿ ಉತ್ತಮ ಫಲಿತಾಂಶ ಪಡೆಯಲು ಪ್ರಯತ್ನಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಸವಾಲುಗಳನ್ನು ಎದುರಿಸಲು ಸಮರ್ಥರಾಗಬೇಕು. ತರಗತಿಗೆ ಗೈರು ಹಾಜರಾಗದೆ ಶಿಸ್ತು ಪಾಲನೆ ಮಾಡುವುದರ ಮೂಲಕ ಅಧ್ಯಯನ ಶೀಲರಾಗಿ ಅತೀ ಹೆಚ್ಚು ಅಂಕ ಗಳಿಸಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಭದ್ರಾ ಎಜುಕೇಷನಲ್ ಟ್ರಸ್ಟ್‌ನ ಛೇರ್ಮನ್ ಕೆ.ಜಿ.ಉಮೇಶ್, ಕಾರ್ಯದರ್ಶಿ ಎಂ.ಸಂಕೇತ್ ಉಪಸ್ಥಿತರಿದ್ದರು. ಕು.ಶ್ರದ್ಧಾ ಸಂಗಡಿಗರು ಪ್ರಾರ್ಥಿಸಿದರು. ಉಪನ್ಯಾಸಕಿ ಡಿ.ಆರ್. ಲಕ್ಷ್ಮಿ ಬಾಯಿ ನಿರೂಪಿಸಿದರು. ಆರ್.ಕೆ.ಲಕ್ಷ್ಮಿ ಸ್ವಾಗತಿಸಿದರು. ನಕ್ಕತ್ ಪರ್ವೀನ್ ವಂದಿಸಿದರು.

# ಸ್ವಪಕ್ಷೀಯರಿಂದಲೇ ಬೇಸರ

## ಅಶೋಕ್ ಮಂಡ್ಯ ಜಿಲ್ಲಾ ಉಸ್ತುವಾರಿಯಿಂದ ಹೊರಕ್ಕೆ



ಬೆಂಗಳೂರು, ಫೆ. 10 - ಸ್ವಪಕ್ಷೀಯ ಮುಖಂಡರ ನಡೆಯಿಂದ ಬೇಸತ್ತ ಕಂದಾಯ ಸಚಿವ ಆರ್. ಅಶೋಕ್ ಮಂಡ್ಯ ಜಿಲ್ಲಾ ಉಸ್ತುವಾರಿ ಹೊಣೆಯಿಂದ ಹೊರ ಬಂದಿದ್ದಾರೆ.

ತಾಂಡಾ ಮತ್ತು ಬುಡಕಟ್ಟು ಜನಾಂಗದ ಕುಟುಂಬದವರಿಗೆ ಹಕ್ಕುಪತ್ರ ನೀಡುವ ಹಾಗೂ ಗ್ರಾಮ ವಾಸ್ತವ್ಯ, 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಕಡೆ' ಸೇರಿದಂತೆ ಕೆಲವು ಪ್ರಮುಖ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕಾಗಿರುವುದರಿಂದ ಮಂಡ್ಯ ಜಿಲ್ಲಾ ಉಸ್ತುವಾರಿ ಹೊಣೆಯಿಂದ ವಿಮುಕ್ತಿಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದರು.

ಅಶೋಕ್ ಅವರ ಮನವಿಗೆ ಮುಖ್ಯಮಂತ್ರಿಯವರು ಸ್ಪಂದಿಸಿ, ಜಿಲ್ಲಾ ಉಸ್ತುವಾರಿಯಿಂದ ಅವರನ್ನು ವಿಮುಕ್ತಿಗೊಳಿಸಿದ್ದಾರೆ. ಅಬ್ಕಾರಿ ಸಚಿವ ಕೆ. ಗೋಪಾಲಯ್ಯ ಅವರಿಗೆ ಹಾಸನ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿಯನ್ನು ಏಕ ಕಾಲದಲ್ಲಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ತಮ್ಮ ಆಪ್ತ ಸಚಿವ ಅಶೋಕ್‌ಗೆ ಮುಖ್ಯಮಂತ್ರಿಯವರು ಈ ಜಿಲ್ಲೆಯ ಹೊಣೆಗಾರಿಕೆ ವಹಿಸಿಕೊಟ್ಟಿದ್ದರು.

ಅಶೋಕ್ ಮಂಡ್ಯ ಜಿಲ್ಲಾ ಉಸ್ತುವಾರಿ ವಹಿಸಿಕೊಂಡಿದ್ದು, ಸಂಪುಟದ ಕೆಲವು ಸಚಿವರು ಮತ್ತು ಶಾಸಕರಿಗೆ ಆಸಕ್ತಿ ಇರಲಿಲ್ಲ. ಆದರೆ ಅದನ್ನು ಬಹಿರಂಗವಾಗಿ ತೋರ್ಪಡಿಸಿಕೊಳ್ಳಲಾಗದೇ ಪಕ್ಷದ ಕಾರ್ಯಕರ್ತರ ಮೂಲಕ ಆಕ್ರೋಶ ವ್ಯಕ್ತಪಡಿಸುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು.

# ರಾಷ್ಟ್ರ ನಿರ್ಮಾಣ ಪಾರ್ಲಿಮೆಂಟಿನಲ್ಲಲ್ಲ, ಶಾಲಾ-ಕಾಲೇಜುಗಳಲ್ಲಿ

**'85 ಮಿಲಿಯನ್ ಸಾಂಪ್ರದಾಯಿಕ ಉದ್ಯೋಗಗಳು ಹೋಗಿ 97 ಮಿಲಿಯನ್ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ' - ಬಾಪೂಜಿ ಎಂಬಿಎ ಸಂಸ್ಥಾಪನಾ ದಿನ 'ಅನಾವರಣ'ದಲ್ಲಿ ಹಿರಿಯ ವಿಜ್ಞಾನಿ ಡಾ. ಶಿವಪ್ರಸಾದ್**




ದಾವಣಗೆರೆ, ಫೆ.10- ನಿಜವಾದ ರಾಷ್ಟ್ರ ನಿರ್ಮಾಣವನ್ನು ಪಾರ್ಲಿಮೆಂಟ್, ಅಸೆಂಬ್ಲಿಗಳಿಂದ ನಿರೀಕ್ಷಿಸದೆ ಯುವಶಕ್ತಿಯಿಂದ ನಿರೀಕ್ಷಿಸಬೇಕಾಗಿದೆ. ಇದಕ್ಕಾಗಿ ಪೂರಕವಾದ ಆಲೋಚನಾ ಶಕ್ತಿ ವಿದ್ಯಾರ್ಥಿಗಳಲ್ಲಿ ಜಾಗೃತವಾಗುವಂತಹ ಶಿಕ್ಷಣವು ಶಾಲಾ-ಕಾಲೇಜುಗಳಿಂದ ಒದಗಿಸಬೇಕಾದ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿಯ ಹಿರಿಯ ವಿಜ್ಞಾನಿ ಮತ್ತು ಪ್ರಾಧ್ಯಾಪಕ ಡಾ. ಎಸ್.ಎಮ್.ಶಿವಪ್ರಸಾದ್ ಅಭಿಪ್ರಾಯಪಟ್ಟರು.

ನಗರದ ಬಾಪೂಜಿ ಅಕಾಡೆಮಿ ಆಫ್ ಮೇನೇಜ್‌ಮೆಂಟ್ ಅಂಡ್ ರಿಸರ್ಚ್‌ನ ಸಂಸ್ಥಾಪನಾ ದಿನ 'ಅನಾವರಣ-2023' ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು.

ಅತ್ಯಾಧುನಿಕವಾದ ನ್ಯಾನೋ, ಬಯೋ ಹಾಗೂ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಅಂದರೆ ಕೃತಕ ಬುದ್ಧಿಮತ್ತೆ. ಈ ಮೂರು ತಂತ್ರಜ್ಞಾನಗಳೇ ಮುಂದಿನ ಜಾಗತಿಕ ಭವಿಷ್ಯ ನಿರ್ಧರಿಸುವಂತಿದ್ದು, ಇದರಿಂದಾಗಿ ದೇಶದಲ್ಲಿ ಸಾಂಪ್ರದಾಯಿಕವಾದ 85 ಮಿಲಿಯನ್‌ನಷ್ಟು ಉದ್ಯೋಗಗಳು ಹೋದರೂ 97 ಮಿಲಿಯನ್‌ನಷ್ಟು ಹೊಸ ಉದ್ಯೋಗಗಳು ಸೃಷ್ಟಿ ಆಗಲಿವೆ. ಇದಕ್ಕಾಗಿ ವಿದ್ಯಾರ್ಥಿಗಳು ಬೌದ್ಧಿಕವಾಗಿ ಸಜ್ಜುಗೊಳ್ಳಬೇಕಿದೆ. ಈ ತಂತ್ರಜ್ಞಾನಗಳಿಂದಾಗಿ ಮುಂದಿನ ದಿನಮಾನಗಳಲ್ಲಿ ಕೃತಕ ಅಂಗಾಂಗಗಳ ತಯಾರಿಕೆಯಾಗಿ ಅಂಗಡಿಯಲ್ಲಿ ಮಾರಾಟಕ್ಕೆ ಬರುವ ಕಾಲ ದೂರವಿಲ್ಲ. ಇದರಿಂದ ಮನುಷ್ಯರು ಸಾವನ್ನೇ ಸಾಯಿಸಿ ದೀರ್ಘಾಯುಷಿಗಳಾಗ ಬಹುದಾಗಿದ್ದು, ಈ ಸವಾಲುಗಳನ್ನು ಎದುರಿಸಲು ಸಹ ಶಿಕ್ಷಣದಲ್ಲಿ ತಿಳಿದುಕೊಳ್ಳುವುದಕ್ಕಿಂತ ಆಲೋಚಿಸುವ ಬಗ್ಗೆ, ಆಲೋಚಿಸಿದ್ದನ್ನು ತಿಳಿಸುವ ಸಾಮರ್ಥ್ಯದ ಬಗ್ಗೆ ಒತ್ತು ಕೊಡಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸಂಸ್ಥೆಯ ಚೇರ್ಮನ್ ಅಥಣಿ ಎಸ್.ವೀರಣ್ಣ ಮಾತನಾಡಿ, 21ನೇ ಶತಮಾನದ ಪ್ರಬಲ ರಾಷ್ಟ್ರ ಎನಿಸಿಕೊಳ್ಳಲು ಹೊರಟಿದ್ದ ಚೀನಾ ದೇಶವನ್ನು ಅನೇಕ ರೀತಿಯಲ್ಲಿ ನಮ್ಮ ದೇಶ ಹಿಂದಟ್ಟಿ ಮುಂದುವರೆಯುತ್ತಿದೆ. ಜಾಗತಿಕ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗುವಂತಹ ಶಿಕ್ಷಣ, ಜ್ಞಾನ ಹಾಗೂ ಕೌಶಲ್ಯ ಇಂದಿನ ಅವಶ್ಯವಾಗಿದ್ದು, ನೆರೆಹೊರೆಯ ದೇಶಗಳ ಹಾಗೂ ಜಾಗತಿಕ ಸ್ಥಿತಿಗತಿಗಳನ್ನು ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಂತೂ ತಿಳಿದುಕೊಳ್ಳಲೇಬೇಕು ಎಂದರು.

ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವನಾನಂದ ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಪ್ರಾಂಶುಪಾಲ ಡಾ. ನವೀನ್ ನಾಗರಾಜ್, ಡಾ. ಸುಜಿತ್‌ಕುಮಾರ್, ರಾಯ್ಕರ್, ವಿಶೇಷ ಆಹ್ವಾನಿತರಾಗಿದ್ದ ಸುರೇಂದ್ರಕುಮಾರ್ ನಿಶಾನಿಮಠ ಉಪಸ್ಥಿತರಿದ್ದರು.

ಮಾನಸ ಹಾಗೂ ವರ್ಷಿತಾ ಕಾರ್ಯಕ್ರಮ ನಿರೂಪಿಸಿದರು. ವಿಕಾಸ್ ಪ್ರಾರ್ಥನಾ ಗೀತೆ ಹಾಡಿದರು. ಕಾಲೇಜಿನ ದೃಶ್ಯ ಪರಿಚಯ, ಮುಖ್ಯ ಅತಿಥಿಗಳ ಪರಿಚಯವನ್ನು ಅಸ್ಗರ್, ಅರುಣ್, ಸುನಯಾ, ಸರ್ಫರಾಜ್ ಹಾಗೂ ನಯನ ಮಾಡಿದರು.

# ಹರಪನಹಳ್ಳಿ: ಜೆ.ಇ.ಇ ಪರೀಕ್ಷೆಯಲ್ಲಿ ಜೆ.ವಿ. ಪ್ರಜ್ವಲ್‌ಗೆ ಶೇ 96.21 ಅಂಕ



ಹರಪನಹಳ್ಳಿ, ಫೆ.10- ಜೆ.ಇ.ಇ ಪರೀಕ್ಷೆಯಲ್ಲಿ ಹರಪನಹಳ್ಳಿಯ ವಿದ್ಯಾರ್ಥಿ ಜೆ.ವಿ. ಪ್ರಜ್ವಲ್ ಶೇ 96.21% ಅಂಕ ಪಡೆದಿದ್ದಾನೆ.

ಅಡುಗೆ ವೆಂಕಟೇಶ್ ಇವರ ಮಗನಾಗಿರುವ ಪ್ರಜ್ವಲ್ ಸಾಧನೆಗೆ ಪಟ್ಟಣದ ವಿಪ್ರ ಸಮಾಜದ ಅಧ್ಯಕ್ಷ ಯು.ರಾಘವೇಂದ್ರ ಪ್ರಸಾದ್, ಮುಖಂಡರುಗಳಾದ ಶ್ಯಾಮಸುಂದರ ಭಟ್, ಸಿ.ಚಂದ್ರಶೇಖರ್ ಭಟ್, ಸಿ.ಎಲ್.ಭಟ್, ಬಿ.ಕೃಷ್ಣಮೂರ್ತಿ, ಕಟ್ಟಿ ರಂಗನಾಥ, ಬಿ.ನಾಗರಾಜ್ ಭಟ್, ಬಿ.ಶ್ರೀನಿಧಿ ಡಾ|| ಕಟ್ಟಿ ಹರ್ಷ, ದಂಡಿನ ಹರೀಶ್, ರಾಮ್ ಭಟ್ ಅವರುಗಳು ಶುಭ ಹಾರೈಸಿದ್ದಾರೆ.

# ಕೊಟ್ಟೂರು ಪಾದಯಾತ್ರಿಗಳಿಗೆ 13ರಂದು ಬೀಳ್ಕೊಡುಗೆ



ದಾವಣಗೆರೆ, ಫೆ.10- ಇದೇ ದಿನಾಂಕ 16ರಂದು ಕೊಟ್ಟೂರು ಶ್ರೀ ಗುರುಬಸವೇಶ್ವರ ಸ್ವಾಮಿ ರಥೋತ್ಸವ ನಡೆಯಲಿದ್ದು, ದಾವಣಗೆರೆಯಿಂದ ಹೊರಡುವ ಪಾದಯಾತ್ರಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ನಾಡಿದ್ದು ದಿನಾಂಕ 13ರ ಸೋಮವಾರ ಸಂಜೆ 5 ಗಂಟೆಗೆ ನಗರದ ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ, ಕೂಡ್ಲಿಗಿ ಅಯ್ಯನಮಠ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ, ಕೊಟ್ಟೂರು ಮಹಲ್ ಮಠದ ಶ್ರೀ ಶಂಕರ ಸ್ವಾಮೀಜಿ, ಕೋಣಂದೂರು ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದು, ಕೈಗಾರಿಕೋದ್ಯಮಿ ಅಥಣಿ ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಮಾಜಿ ಮೇಯರ್ ಬಿ.ಜಿ.ಅಜಯ್ ಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ನಿರ್ಮಾಣ ಹಂತದಲ್ಲಿರುವ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನಕ್ಕೆ ದಾನಿಗಳು ಧನ ಸಹಾಯ ಮಾಡುವಂತೆ ಇದೇ ಸಂದರ್ಭದಲ್ಲಿ ಅವರು ಕೋರಿದರು.

ಸಿ.ಆರ್. ಬಸವರಾಜಪ್ಪ ಮಾತನಾಡಿ, ಅರಸೀಕೆರೆಯ ಶ್ರೀ ಗುರು ಕೋಲಶಾಂತೇಶ್ವರ ವಿರಕ್ತಮಠದಲ್ಲಿ ಇದೇ ದಿನಾಂಕ 14ರಂದು 25ನೇ ಔಷಧೋಪಚಾರ ಸೇವೆಯ ಸಮಾರೋಪ ಸಮಾರಂಭ ನಡೆಯಲಿದೆ. ಅರಸೀಕೆರೆ ಶ್ರೀ ಗುರು ಕೋಲಶಾಂತೇಶ್ವರ ವಿರಕ್ತಮಠದ ಶ್ರೀ ಶಾಂತಲಿಂಗ ದೇಶೀಕೇಂದ್ರ ಸ್ವಾಮೀಜಿ, ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಚಿದಾನಂದ, ಮಲ್ಲಾಬಾದಿ ಗುರುಬಸವರಾಜ್, ವಿನುತಾ ರವಿ, ಕಂಬಿನೂಲು ರುದ್ರಬಸವರಾಜ್, ಬೂಸ್ನೂರು ಸುಜಾತ, ಜೋಳದ ಕೊಟ್ರಬಸಪ್ಪ ಉಪಸ್ಥಿತರಿದ್ದರು.

# 'ರಶ್ಮಿ' ಹೆಣ್ಣು ಮಕ್ಕಳ ಶಾಲೆ ವಾರ್ಷಿಕೋತ್ಸವ ಚಿತ್ರಶ್ರೀಗೆ 'ಆದರ್ಶ ವಿದ್ಯಾರ್ಥಿನಿ' ಪ್ರಶಸ್ತಿ



ದಾವಣಗೆರೆ, ಫೆ.10- ನಗರದ ಡಾ.ಡಿ.ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್‌ನ 'ರಶ್ಮಿ' ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ವಾರ್ಷಿಕೋತ್ಸವ ಸಮಾರಂಭ ಜರುಗಿತು.

ಕಾರ್ಯಕ್ರಮವನ್ನು ಭಾಜಪ ಮುಖಂಡ ಲೋಕಿಕೆರೆ ನಾಗರಾಜ ಉದ್ಘಾಟಿಸಿದರು. ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀಮತಿ ಅರುಣಾ ಪರಮೇಶ್ವರಪ್ಪ ವಹಿಸಿದ್ದರು. ವನಿತಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಪದ್ಮ ಪ್ರಕಾಶ್ ಅವರು ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಎಸ್.ಜಿ. ಚಿತ್ರಶ್ರೀಗೆ 'ಆದರ್ಶ ವಿದ್ಯಾರ್ಥಿನಿ' ಪ್ರಶಸ್ತಿ ಪ್ರದಾನ ಮಾಡಿದರು.

# ನಗರದಲ್ಲಿ ರಾಜ್ಯಮಟ್ಟದ ನೇಕಾರ ಕಪ್ ಕ್ರಿಕೆಟ್ ಪಂದ್ಯಾವಳಿ



ದಾವಣಗೆರೆ, ಫೆ. 10- ನಗರದಲ್ಲಿ ಈಚೆಗೆ ನೇಕಾರ ಸಮುದಾಯಗಳ ಕ್ರೀಡಾಪಟುಗಳಿಗಾಗಿ ರಾಜ್ಯಮಟ್ಟದ ನೇಕಾರ ಕಪ್ ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ದೊಡ್ಡಬಳ್ಳಾಪುರದ ಗಾಯತ್ರಿಪೀಠ ತಂಡ ಪ್ರಥಮ, ದಾವಣಗೆರೆ ನೇಕಾರ ಕ್ರಿಕೆಟರ್ಸ್ ದಾವಣಗೆರೆ ತಂಡ ದ್ವಿತೀಯ, ಕಿಕ್ಕೇರಿಯ ರಾಯಲ್ ಶೆಟ್ಟಿ ತಂಡ ತೃತೀಯ, ದಾವಣಗೆರೆ ಎಸ್.ಎಂ.ಆರ್. ನೇಕಾರ್ ಎಕ್ಸ್ ಎಲ್ ತಂಡ ನಾಲ್ಕನೇ ಸ್ಥಾನ ಪಡೆದಿದೆ. ಅತ್ಯುತ್ತಮ ಬೌಲರ್ ಆಗಿ ದೊಡ್ಡಬಳ್ಳಾಪುರ ತಂಡದ ಆಟಗಾರ ರಮೇಶ್, ಅತ್ಯುತ್ತಮ ಬ್ಯಾಟ್ಸ್‌ಮನ್ ಆಗಿ ದೊಡ್ಡಬಳ್ಳಾಪುರ ತಂಡದ ಆಟಗಾರ ಡಿ.ರಾಕೇಶ್, ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ದಾವಣಗೆರೆ ತಂಡದ ಆಟಗಾರ ರಾಜಶೇಖರ್ ಪಡೆದಿದ್ದಾರೆ.

# ಜಿ20 ಪ್ರವಾಸಿಗರಿಗೆ ಯು.ಪಿ.ಐ. ಸೌಲಭ್ಯ

ಮುಂಬೈ, ಫೆ. 10 – ಜಿ20 ದೇಶಗಳ ಪ್ರವಾಸಿಗರು ಭಾರತದಲ್ಲಿ ಪಾವತಿ ಮಾಡುವಾಗ ಮೊಬೈಲ್‌ನಲ್ಲಿ ಯು.ಪಿ.ಐ. (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಬಳಸಲು ಅನುಮತಿ ನೀಡಿರುವ ರಿಸರ್ವ್ ಬ್ಯಾಂಕ್, ಈ ಕುರಿತು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಬೇರೆ ಬೇರೆ ಬ್ಯಾಂಕ್ ಖಾತೆಗಳನ್ನು ಯು.ಪಿ.ಐ. ಮೂಲಕ ಒಂದೇ ಆಪ್‌ನಲ್ಲಿ ಜೋಡಣೆ ಮಾಡಲಾಗುತ್ತದೆ. ಇದರಿಂದ ಸುಲಭವಾಗಿ ಹಲವು ಬ್ಯಾಂಕ್‌ಗಳ ಸೌಲಭ್ಯ ಪಡೆಯಲು ಹಾಗೂ ಪಾವತಿ ಮಾಡಲು ಸಾಧ್ಯವಾಗುತ್ತದೆ. ವಿದೇಶಿಯರು ಹಾಗೂ ಭಾರತಕ್ಕೆ ಭೇಟಿ ನೀಡುವ ಅನಿವಾಸಿ ಭಾರತೀಯರು ಯು.ಪಿ.ಐ. ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸುವುದಾಗಿ ರಿಸರ್ವ್ ಬ್ಯಾಂಕ್ ಹೇಳಿತ್ತು. ಆರಂಭಿಕ ಹಂತದಲ್ಲಿ ಜಿ20 ದೇಶಗಳಿಂದ ಬರುವ ಪ್ರಯಾಣಿಕರಿಗೆ ಈ ಸೌಲಭ್ಯ ಕಲ್ಪಿಸಲಾಗುವುದು.

# ಅದಾನಿ ಕುಸಿತ : ರಕ್ಷಣೆಗೆ ಬಲಿಷ್ಠ ವ್ಯವಸ್ಥೆ ಬೇಕು

**ಕೇಂದ್ರ, ಸೆಬಿ ನಿಲುವು ಕೇಳಿದ ಸುಪ್ರೀಂ ಕೋರ್ಟ್**

ನವದೆಹಲಿ, ಫೆ.10 - ಅದಾನಿ ಸಮೂಹದ ಷೇರುಗಳ ಬೆಲೆಯನ್ನು ಕೃತಕವಾಗಿ ಕುಸಿಯುವಂತೆ ಮಾಡಲಾಗಿದೆ ಎಂಬ ಅರ್ಜಿಯ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಭಾರತೀಯ ಹೂಡಿಕೆದಾರರ ರಕ್ಷಣೆಗಾಗಿ ಬಲಿಷ್ಠ ವ್ಯವಸ್ಥೆಯ ಅಗತ್ಯವಿದೆ ಎಂದು ಹೇಳಿದೆ.

ಹೂಡಿಕೆದಾರರ ಹಿತ ಕಾಯುವ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಹಾಗೂ ಮಾರುಕಟ್ಟೆ ನಿಯಂತ್ರಕ ಸೆಬಿ ತಮ್ಮ ನಿಲುವುಗಳನ್ನು ತಿಳಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ.

ಹೂಡಿಕೆದಾರರ ರಕ್ಷಣೆಗಾಗಿ ಪರಿಣಿತರ ಸಮಿತಿಯೊಂದನ್ನು ರಚಿಸುವ ಬಗ್ಗೆಯೂ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ವಿಚಾರಣೆ ನಡೆಸುತ್ತಿದ್ದು, ಪೀಠದಲ್ಲಿ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪರ್ಡಿವಾಲ ಅವರಿದ್ದಾರೆ.

ಮಾರುಕಟ್ಟೆ ನಿಯಂತ್ರಕರು ಹಾಗೂ ಇತರೆ ಸಂಸ್ಥೆಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ ಎಂದು ಸೆಬಿ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ಹೇಳಿದರು.

ಷೇರು ಪೇಟೆ ಸಾಮಾನ್ಯವಾಗಿ ಭಾವನೆಗಳ ಮೇಲೆ ನಡೆಯುತ್ತದೆ. ಹೀಗಾಗಿ ಪ್ರಕರಣದ ಬಗ್ಗೆ ವಿಚಾರಗಳನ್ನು ತಿಳಿಸುತ್ತಿದ್ದೇವೆಯೇ ಹೊರತು ಯಾವುದೇ ಟಿಪ್ಪಣಿ ಮಾಡುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ. ಹಿಂಡನ್‌ಬರ್ಗ್ ರೀಸರ್ಚ್ ವರದಿಯ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯ ತೀವ್ರ ಕುಸಿತವಾಗಿದೆ. ಈ ಹಿನ್ನೆಲೆ ಯಲ್ಲಿ, ವಕೀಲ ವಿಶಾಲ್ ತಿವಾರಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಿದ್ದಾರೆ.

ಅದಾನಿ ಸಮೂಹದ ವಿರುದ್ಧ ಮಾಡಲಾಗಿರುವ ಆರೋಪಗಳ ತನಿಖೆಗಾಗಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ರಚಿಸಬೇಕೆಂದು ತಿವಾರಿ ಮನವಿ ಮಾಡಿಕೊಂಡಿದ್ದಾರೆ.

# ಭರಮಸಾಗರದಲ್ಲಿ ತರಳಬಾಳು ಜಗದ್ಗುರುಗಳಿಗೆ ಗೌರವ ಸಮರ್ಪಣೆ



ದಾವಣಗೆರೆ, ಫೆ. 10- ಮುಂದಿನ ತರಳಬಾಳು ಹುಣ್ಣಿಮೆಯನ್ನು ಭರಮಸಾಗರದಲ್ಲಿ ನಡೆಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ರಾಜನಹಳ್ಳಿಯಿಂದ ಸಿರಿಗೆರೆಗೆ ತೆರಳುವ ಮಾರ್ಗ ಮಧ್ಯೆ ಭರಮಸಾಗರದಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಗ್ರಾಮದ ವತಿಯಿಂದ ಬರಮಾಡಿಕೊಂಡು ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕ ಎಂ. ಚಂದ್ರಪ್ಪ, ಜಿಲ್ಲಾ ಪಂಚಾಯತಿ ಸದಸ್ಯ ಡಿ.ವಿ. ಶರಣಪ್ಪ, ಡಿ.ಎಸ್. ಪ್ರವೀಣಕುಮಾರ್, ತೀರ್ಥಣ್ಣ, ಶೈಲೇಶ್, ವಿರೂಪಣ್ಣ, ಕಲ್ಲೇಶ್, ಲೋಲಾಕ್ಷಮ್ಮ ಮತ್ತಿತರರಿದ್ದರು.

# ಕಳೆದ ವರ್ಷದ ಬಜೆಟ್ ಓದಿದ ರಾಜಸ್ಥಾನದ ಮುಖ್ಯಮಂತ್ರಿ

ಜೈಪುರ, ಫೆ. 10 - ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಈ ವರ್ಷದ ಬಜೆಟ್ ಮಂಡಿಸುವ ಬದಲು, ಕಳೆದ ವರ್ಷದ ಬಜೆಟ್ ಓದಿದ ಘಟನೆ ನಡೆದಿದೆ. ಇದಕ್ಕಾಗಿ ಕ್ಷಮೆ ಯಾಚಿಸಿರುವ ಗೆಹ್ಲೋಟ್, ಇದು ಮಾನವ ಸಹಜ ಲೋಪ ಎಂದಿದ್ದಾರೆ.

ಮಾನವ ಸಹಜ ತಪ್ಪಿನಿಂದಾಗಿ ಬಜೆಟ್‌ಗೆ ಹೆಚ್ಚುವರಿ ಹಾಳೆ ಸೇರಿಸಲಾಗಿತ್ತು ಎಂದು ಗೆಹ್ಲೋಟ್ ಸದನದಲ್ಲಿ ಸ್ಪಷ್ಟನೆ ನೀಡಿದ್ದಾರೆ.

# ಆವರಗೊಳ್ಳದಲ್ಲಿ ಇಂದು ಓಕುಳಿ



ದಾವಣಗೆರೆ ತಾಲ್ಲೂಕು ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿ ಮಹಾರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಸ್ವಾಮಿಯ ಗುಗ್ಗಳ ಸೇವೆ ಭಕ್ತರಿಂದ ನಡೆಯಲಿದ್ದು, ನಂತರ ರಾತ್ರಿ 10 ಕ್ಕೆ ಓಕುಳಿ ಸೇವೆ ಮತ್ತು ಗಂಗಾಪೂಜೆ, ಉಯ್ಯಾಲೆ ಮಂಟಪದಲ್ಲಿ ಶ್ರೀ ಸ್ವಾಮಿಯು ಆಸೀನರಾಗುವರು ನಂತರ ಭಕ್ತರಿಂದ ವೀರಗಾಸೆ ಸೇವೆ ನಡೆಯಲಿದೆ.

# ಡಿಸೆಂಬರ್‌ನಲ್ಲಿ ಕೈಗಾರಿಕಾ ಬೆಳವಣಿಗೆ ಶೇ.4.3

ನವದೆಹಲಿ, ಫೆ. 10 – ಕೈಗಾರಿಕಾ ಉತ್ಪಾದನಾ ಬೆಳವಣಿಗೆ ದರ ಕಳೆದ ಡಿಸೆಂಬರ್‌ನಲ್ಲಿ ಶೇ.4.3ರಷ್ಟಿದೆ. 2021ರ ಡಿಸೆಂಬರ್‌ನಲ್ಲಿ ಬೆಳವಣಿಗೆ ದರ ಶೇ.1ರಷ್ಟಿತ್ತು.

ರಾಷ್ಟ್ರೀಯ ಅಂಕಿ ಅಂಶಗಳ ಇಲಾಖೆ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಬೆಳವಣಿಗೆ ದರದಲ್ಲಿ ಏರಿಕೆಯಾಗಿದೆ. ಆದರೆ, 2022ರ ನವೆಂಬರ್‌ಗೆ ಹೋಲಿಸಿದರೆ ಬೆಳವಣಿಗೆ ಕಡಿಮೆಯಾಗಿದೆ. ನವೆಂಬರ್‌ನಲ್ಲಿ ಬೆಳವಣಿಗೆ ದರ ಶೇ.7.3ರಷ್ಟಿತ್ತು.

# ಹಿಮೊಫಿಲಿಯಾ ಕೌಶಲ್ಯ ಅಭಿವೃದ್ಧಿ ರಾಜ್ಯಮಟ್ಟದ 2 ನೇ ಹಂತದ ಕಾರ್ಯಾಗಾರ



ದಾವಣಗೆರೆ, ಫೆ. 10- ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯು ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಕುಟುಂಬ ಕಲ್ಯಾಣ ನಿರ್ದೇಶನಾಲಯ ಮತ್ತು ಜ.ಜ.ಮು ವೈದ್ಯಕೀಯ ಮಹಾವಿದ್ಯಾಲಯದ ಸಹಭಾಗಿತ್ವದಲ್ಲಿ ರಾಜ್ಯಮಟ್ಟದ ಹಿಮೊಫಿಲಿಯಾ ರಕ್ತ ರೋಗ ಲಕ್ಷಣ ಶಾಸ್ತ್ರಜ್ಞರುಗಳಿಗೆ ರೋಗ ಪತ್ತೆ ಹಚ್ಚುವ ಕುರಿತು 2ನೇ ಹಂತದ ಕಾರ್ಯಾಗಾರ ನಗರದಲ್ಲಿ ಎರಡು ದಿನಗಳ ಕಾಲ ನಡೆಯಿತು.

ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪೆಥಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಸುರೇಶ ಹನಗವಾಡಿ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಯ ರಕ್ತ ರೋಗ ಲಕ್ಷಣ ಶಾಸ್ತ್ರಜ್ಞರುಗಳಿಗೆ ರೋಗ ಪತ್ತೆ ಹಚ್ಚುವ ಕುರಿತು ತರಬೇತಿ ನೀಡುವುದು ಈ ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಾಗಾರ ಉದ್ಘಾಟಿಸಿದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಬಿ. ಮುರುಗೇಶ್ ಮಾತನಾಡಿ, ಹಿಮೊಫಿಲಿಯಾ ಸೊಸೈಟಿ ಈ ಮಟ್ಟಕ್ಕೆ ಬೆಳೆಯಲು ಸಂಸ್ಥೆಯ ಅಧ್ಯಕ್ಷ ಡಾ. ಸುರೇಶ ಹನಗವಾಡಿಯವರ ಪರಿಶ್ರಮ ಮತ್ತು ಕೊಡುಗೆ ಅಪಾರ ಎಂದು ಹಿಮೊಫಿಲಿಯಾ ಸಮುದಾಯದ ಬಗ್ಗೆ ಇರುವ ಅವರ ಕಾಳಜಿಯನ್ನು ಪ್ರಶಂಸಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌರವಾಧ್ಯಕ್ಷರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ ಮಾತನಾಡಿ, ಕುಸುಮ ರೋಗಿಗಳ ಆರೈಕೆ, ಕಾಳಜಿ ಅತ್ಯಂತ ಸವಾಲಿನ ಕೆಲಸ, ಜಿಲ್ಲಾಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಕ್ತ ರೋಗ ಲಕ್ಷಣ ಶಾಸ್ತ್ರಜ್ಞರುಗಳಿಗೆ ನೀವೂ ಸಹ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಿ ಈ ಅಭಿಯಾನದಲ್ಲಿ ಯಶಸ್ವಿಯಾಗಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಸರ್. ಎಂ.ವಿ. ಕಾಲೇಜಿನ ಕಾರ್ಯದರ್ಶಿ ಎಸ್.ಜೆ. ಶ್ರೀಧರ್ ಅವರು, ಹಿಮೊಫಿಲಿಯಾ ಸೊಸೈಟಿಯ ಸೇವಾ ಕಾರ್ಯಗಳು ಮತ್ತು ಸಂಸ್ಥೆಯು ಹೊಂದಿರುವ ಬದ್ಧತೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಜಾನ್ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರು ಮತ್ತು ಉಪಾಧ್ಯಕ್ಷರು ಡಾ. ಸಿಸಿಲ್ ರೌಸ್ ಸೆಂಟ್, ಎಸ್.ಡಿ.ಎಮ್. ವೈದ್ಯಕೀಯ ಕಾಲೇಜಿನ ರಕ್ತ ರೋಗ ಲಕ್ಷಣ ಶಾಸ್ತ್ರಜ್ಞ ಡಾ. ಗಿರೀಶ್ ಕಾಮತ್ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು

ದಾವಣಗೆರೆ ಜ.ಜ.ಮು ವೈದ್ಯಕೀಯ ಕಾಲೇಜಿನ ರಕ್ತ ರೋಗ ಲಕ್ಷಣ ಶಾಸ್ತ್ರಜ್ಞ ಡಾ. ವರದೇಂದ್ರ ಕುಲಕರ್ಣಿ, ಮಂಗಳೂರು ವೆನ್‌ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶರತ್ ಕುಮಾರ್ ರಾವ್ ಉಪಸ್ಥಿತರಿದ್ದರು.

ಮಹಿಳಾ ವಿಭಾಗದ ಅಧ್ಯಕ್ಷೆ ಡಾ. ಮೀರಾ ಹನಗವಾಡಿ ನಿರೂಪಿಸಿದರು. ಜ.ಜ.ಮು ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿನಿ ಡಾ. ಸೌಮ್ಯ ಕೋರಿ ವಂದಿಸಿದರು.

# ವ್ಯವಹಾರ ಜ್ಞಾನವಿಲ್ಲದೆ ಬದುಕಲು ಸಾಧ್ಯವಿಲ್ಲ

## ಚಿಣ್ಣರ ಸಂತೆ ಸಂಭ್ರಮದಲ್ಲಿ ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ್



ದಾವಣಗೆರೆ, ಫೆ.10- ಸಮಾಜದಲ್ಲಿ ಬದುಕು ಸಾಗಿಸಲು ಪದವಿ ಪರೀಕ್ಷೆಗಳಿಗಿಂತ ವ್ಯವಹಾರ ಜ್ಞಾನ ಹಾಗೂ ಲೋಕಜ್ಞಾನ ಮುಖ್ಯ, ಇವು ಪಠ್ಯದಿಂದ ಸಿಗುವುದಿಲ್ಲ. ಭಾಗವಹಿಸುವಿಕೆಯಿಂದ ಸಿಗುವುದು ಎಂದು ಹಿರಿಯ ಪತ್ರಕರ್ತ ಎಚ್. ಬಿ.ಮಂಜುನಾಥ್ ಹೇಳಿದರು.

ನಗರದ ರಿಷಿ ಸಮೂಹ ಸಂಸ್ಥೆಗಳ ಲಿಟ್ಲ್ ಚಾಂಪ್ ಗುರುಕುಲಮ್‌ನ ಆವರಣದಲ್ಲಿ ಏರ್ಪಡಿಸಲಾಗಿದ್ದ ಪುಟ್ಟ ಮಕ್ಕಳೇ ನಿರ್ವಹಿಸುವ ಚಿಣ್ಣರ ಸಂತೆ ಸಂಭ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡು ಅವರು ಮಾತನಾಡಿದರು.

ದಶಕಗಳ ಹಿಂದೆ ಪೋಷಕರು ಮಾರುಕಟ್ಟೆ, ಸಂತೆ, ಅಂಗಡಿಗಳಿಗೆ ಹೋಗುವಾಗ ಮಕ್ಕಳನ್ನೂ ಕರೆದುಕೊಂಡು ಹೋಗುತ್ತಿದ್ದರು. ಆದರೆ ಈಗ ಮಕ್ಕಳನ್ನು ಕರೆದುಕೊಂಡು ಹೋಗುವುದಿರಲಿ, ಪೋಷಕರೇ ಮಾರುಕಟ್ಟೆಗೆ, ಅಂಗಡಿಗೆ ಹೋಗುವ ಪ್ರಮೇಯವಿಲ್ಲ. ಫೋನ್ ಮಾಡಿ ಹೇಳಿದರೆ ಸಾಕು ಮನೆ ಬಾಗಿಲಿಗೇ ವಸ್ತುಗಳು ಬರುವಂತಾಗಿದ್ದು ಮಕ್ಕಳಿಗಂತೂ ಮಾರುಕಟ್ಟೆಯ ಜ್ಞಾನವೇ ದೊರೆಯುತ್ತಿಲ್ಲ. ಹಣ್ಣು, ತರಕಾರಿ, ಸೊಪ್ಪು, ದವಸ-ಧಾನ್ಯಗಳು, ಕಿರಾಣಿ ವಸ್ತುಗಳು ಯಾವುದರ ಪರಿಚಯವಾಗಲೀ, ಹೆಸರುಗಳಾಗಲೀ, ಬೆಲೆ ಮತ್ತು ಮೌಲ್ಯವಾಗಲೀ ಈಗಿನ ಮಕ್ಕಳ ಅರಿವಿಗೆ ಬರುತ್ತಲೇ ಇಲ್ಲ. ಶಾಲೆಗಳಲ್ಲಿ ಏರ್ಪಾಡಾಗುವ ಇಂತಹ ಚಿಣ್ಣರ ಸಂತೆ ಸಂಭ್ರಮದಲ್ಲಿ ಪೋಷಕರ ಮಾರ್ಗದರ್ಶನದಲ್ಲಿ ಮಕ್ಕಳು ಭಾಗವಹಿಸುವುದರಿಂದ ವಸ್ತುಗಳ ಪರಿಚಯ, ಪರೀಕ್ಷೆ, ದರ ನಿರ್ಧರಣೆ ಹಾಗೂ ಕೊಡುಕೊಳ್ಳುವ ವ್ಯವಹಾರಗಳ ಮೂಲ ಪಾಠಗಳು ಸಹ ಪ್ರಾಯೋಗಿಕವಾಗಿ ಮಕ್ಕಳಿಗೆ ಸಿಗುತ್ತದೆ ಎಂದು ಮಂಜುನಾಥ್ ಹೇಳಿದರು.

ದುಡ್ಡಿನ ಆವಿಷ್ಕಾರವಾಗುವ ಮೊದಲು ಮಾರುಕಟ್ಟೆಯು ವಸ್ತುಗಳ ವಿನಿಮಯದಿಂದಲೇ ನಡೆಯುತ್ತಿತ್ತು. ಈಗಲೂ ಸಹ ವಿದೇಶಗಳೊಂದಿಗೆ ಆಮದು, ರಫ್ತು ವ್ಯವಹಾರ ನಡೆಯುವಲ್ಲಿ ದುಡ್ಡಿಗಿಂತ ವಸ್ತು ವಿನಿಮಯ ರೂಪವೇ ಪ್ರಧಾನವಾಗಿದೆ. ವಸ್ತು ವಸ್ತುಗಳ ನಡುವಿನ ಮೌಲ್ಯ ವ್ಯತ್ಯಾಸಗಳ ಜ್ಞಾನ ಇದಕ್ಕೆ ಅವಶ್ಯ. ಈ ನಿಟ್ಟಿನಲ್ಲಿ ಸಹ ಇಂತಹ ಚಿಣ್ಣರ ಸಂತೆಯಿಂದ ಪುಟ್ಟ ಮಕ್ಕಳಿಗೂ ಪ್ರಾಯೋಗಿಕ ಜ್ಞಾನ ಬರುತ್ತದೆ ಎಂದರು.

ಪೋಷಕರ ಮಾರ್ಗದರ್ಶನದಲ್ಲಿ ಪುಟ್ಟ ಮಕ್ಕಳು ಶಾಲೆಯ ಆವರಣದಲ್ಲಿ ಹಣ್ಣು, ಹೂವು, ಸೊಪ್ಪು, ತರಕಾರಿ, ತಿಂಡಿ ತಿನಿಸುಗಳು, ಪಾನೀಯಗಳು ಹೀಗೆ ಬಹುವಿಧ ಮಾರುಕಟ್ಟೆ ಸಂತೆಯನ್ನು ಸಂಭ್ರಮದಿಂದ ಮಾಡಿದರು.

ಶಿಕ್ಷಣ ಸಂಸ್ಥೆಯ ಶ್ರೀಮತಿ ಜ್ಯೋತಿ ದರ್ಶನ್ ಮಾರ್ಗದರ್ಶನದಲ್ಲಿ ಕಿಶನ್, ಲಕ್ಷ್ಮಿ, ವಿಕ್ರಮ್ ಜೋಶಿ ಮುಂತಾದವರ ಸಹಯೋಗದಲ್ಲಿ ಈ ಚಿಣ್ಣರ ಸಂತೆ ಸಂಭ್ರಮ ನೆರವೇರಿತು.

ಅರ್ಚನಾ, ದೀಪಾ, ಮಧುರಾ, ಕಲಾಭಿಮಾನಿ, ರುಚಿತಾ, ಪ್ರಾಪ್ತಿ ಮುಂತಾದವರು ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte